# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




ಕೇರಳದ ಸಿಪಿಐ(ಎಮ್) ಸರ್ಕಾರದ ನಿರ್ಬಂಧ ಆದೇಶವನ್ನು ಧಿಕ್ಕರಿಸಿ ಸ್ವಾತಂತ್ರ್ಯೋತ್ಸವ ದಿನದಂದು ಕೇರಳದ ಪಾಲಕ್ಕಾಡ್‌ನ ಕರ್ಣಕಿ ಅಮ್ಮನ್ ಪ್ರೌಢಶಾಲೆಯಲ್ಲಿ ಆರೆಸ್ಸೆಸ್ ಸರಸಂಘಚಾಲಕ ಮೋಹನ್ ಭಾಗವತ್ ಧ್ವಜಾರೋಹಣ ನೆರವೇರಿಸಿದರು. ಶಾಲೆಯ ಆಡಳಿತ ಮಂಡಳಿಯು ಭಾಗವತ್ ಅವರನ್ನು ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮಕ್ಕೆ ಆಹ್ವಾನಿಸಿತ್ತು. ಪಾಲಕ್ಕಾಡ್ ಜಿಲ್ಲಾಧಿಕಾರಿ ಭಾಗವತ್‌ರವರಿಗೆ ಧ್ವಜಾರೋಹಣ ಮಾಡಲು ಅವಕಾಶ ನೀಡಬಾರದು ಎಂದು ಶಾಲೆಗೆ ಆದೇಶ ನೀಡಿದ್ದರು.


ಸಂಪುಟ : 39 | ಸಂಚಿಕೆ : 2 | ಹೇಮಲಂಬಿ–ಶ್ರಾವಣ | ಕಲಿಯುಗಾಬ್ದ 5119 | 1–9–2017 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


# ಆರ್ಟಿಕಲ್ 35ಎ: ಕಾಶ್ಮೀರದ ಪ್ರತ್ಯೇಕತೆಗೊಂದು ಹಿಂಬಾಗಿಲ ದಾರಿ

ಜಮ್ಮು ಕಾಶ್ಮೀರ ರಾಜ್ಯಕ್ಕೊಂದು ಪ್ರತ್ಯೇಕ ಸಂವಿಧಾನವಿದೆ, ಪ್ರತ್ಯೇಕ ಧ್ವಜವಿದೆ, ದೇಶದ ಎಲ್ಲಾ ರಾಜ್ಯಗಳಲ್ಲಿ ಜಾರಿಗೆ ಬರುವ ಕೇಂದ್ರ ಕಾನೂನು ಜಮ್ಮು ಕಾಶ್ಮೀರದಲ್ಲಿ ಲಾಗೂ ಆಗುವುದಿಲ್ಲ, ಕಾಶ್ಮೀರಿಗಳಲ್ಲದ ಭಾರತೀಯ ನಾಗರಿಕರು ದೇಶದ ಯಾವುದೇ ಮೂಲೆಯಲ್ಲಿ ಸ್ಥಿರಾಸ್ತಿ ಖರೀದಿಸಿ ವಾಸ ಮಾಡಬಹುದಾದರೂ ಜಮ್ಮು ಕಾಶ್ಮೀರದಲ್ಲಿ ಸ್ಥಿರಾಸ್ತಿ ಖರೀದಿಸುವಂತಿಲ್ಲ ಮೊದಲಾದ ವಿಷಯಗಳ ಚರ್ಚೆ ಪ್ರತಿಬಾರಿ ಬಂದಾಗಲೂ ಇದಕ್ಕೆಲ್ಲ ಸಂವಿಧಾನದ 370ನೇ ವಿಧಿಯನ್ನು ದೂಷಣೆ ಮಾಡಲಾಗುತ್ತದೆ. 370ನೇ ವಿಧಿ ಜಮ್ಮು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡುತ್ತದೆ, ಕಾಶ್ಮೀರದ ಪ್ರತ್ಯೇಕತೆಗೆ ಇಂಬು ಕೊಡುತ್ತದೆ ಎನ್ನುವುದು ಸಾಮಾನ್ಯವಾಗಿ ಪ್ರಚಲಿತವಾಗಿರುವ ಅಭಿಪ್ರಾಯವಾಗಿದೆ. ಬ್ರಿಟಿಷರಿಂದ ಸ್ವತಂತ್ರಗೊಂಡ ನಂತರ ದೇಶದ ಉಳಿದೆಲ್ಲ ರಾಜ್ಯಾಡಳಿತ ಸಂಸ್ಥಾನಗಳ ಪ್ರಮುಖರ ಹಸ್ತಾಕ್ಷರ ಮಾಡಿದ ವಿಲಯನ ಒಪ್ಪಂದದಂತೆ ಅಕ್ಟೋಬರ್ 26, 1947ರಂದು ಜಮ್ಮು ಕಾಶ್ಮೀರದ ಮಹಾರಾಜ ಹರಿಸಿಂಗ್‌ರು ವಿಲಯನ ಒಪ್ಪಂದಕ್ಕೆ ಹಸ್ತಾಕ್ಷರ ಮಾಡುವ ಮೂಲಕ ಜಮ್ಮು ಕಾಶ್ಮೀರ ರಾಜ್ಯವನ್ನು ಭಾರತ ಗಣತಂತ್ರದಲ್ಲಿ ವಿಲೀನಗೊಳಿಸಿದ್ದರು. ಆದರೆ 1950ರಲ್ಲಿ ಇಡೀ ದೇಶದಲ್ಲಿ ಜಾರಿಗೆ ಬರುವಂತೆ ಭಾರತೀಯ ಸಂವಿಧಾನವನ್ನು ಅಂಗೀಕರಿಸುವ ಸಂದರ್ಭದಲ್ಲಿ ಜಮ್ಮು ಕಾಶ್ಮೀರದಲ್ಲಿ ಪಾಕಿಸ್ತಾನ ಆಕ್ರಮಣದಿಂದ ಯುದ್ಧದ ಸಂದರ್ಭವಿದ್ದು ಆ ವಿಷಯವನ್ನು ವಿಶ್ವಸಂಸ್ಥೆಗೆ ಒಯ್ದ ಕಾರಣದಿಂದ ಜಮ್ಮು ಕಾಶ್ಮೀರ ರಾಜ್ಯದಲ್ಲಿ ಭಾರತದ ಸಂವಿಧಾನವನ್ನು ಜಾರಿಗೊಳಿಸುವ ತಾತ್ಕಾಲಿಕ ಪ್ರಾವಧಾನವಾಗಿ ಸೇರಿಸಲ್ಪಟ್ಟದ್ದು 370ನೇ ವಿಧಿ. ಇದೊಂದು ತಾತ್ಕಾಲಿಕ ಮತ್ತು ವಿಸ್ತರಣಾತ್ಮಕ ಆವಶ್ಯಕತೆಯೇ ಹೊರತು ಜಮ್ಮು ಕಾಶ್ಮೀರಕ್ಕೆ ಯಾವುದೇ ವಿಶೇಷ ಸ್ಥಾನಮಾನ ನೀಡುವುದಿಲ್ಲ. ಆದರೆ 370ನೇ ವಿಧಿಯ ಹೆಸರಿನಲ್ಲಿ ಕಾನೂನು ಬಾಹಿರವಾಗಿ ಸಂವಿಧಾನಕ್ಕೆ ಸೇರಿಸಿದ ಇನ್ನೊಂದು ವಿಧಿಯಿದೆ, ಅದು ಸಾಕಷ್ಟು ಅನ್ಯಾಯವನ್ನು ಮಾಡಿದೆ. ಆ ವಿಧಿಯೇ ಆರ್ಟಿಕಲ್ 35ಎ. ಆಸಕ್ತಿಯ ವಿಷಯವೆಂದರೆ ಜಮ್ಮು ಕಾಶ್ಮೀರ ರಾಜ್ಯಕ್ಕಷ್ಟೇ ಅನ್ವಯವಾಗುವ ಇಂಥದ್ದೊಂದು ಆರ್ಟಿಕಲ್ ಭಾರತದ ಸಂವಿಧಾನದಲ್ಲಿದೆ ಎನ್ನುವ ವಿಷಯ ಸಾಮಾನ್ಯರಿಗೆ ಬಿಡಿ ಕಾನೂನು ತಜ್ಞರಿಗೇ, ನ್ಯಾಯಾಧೀಶರಿಗೇ ಗೊತ್ತಿಲ್ಲ. ಕಾರಣ ಸಂವಿಧಾನದ ಮುಖ್ಯ ಪಠ್ಯದಲ್ಲಿ ಇದು ಸಿಗುವುದಿಲ್ಲ! ಸಂಸತ್ತನ್ನು ಕತ್ತಲೆಯಲ್ಲಿಟ್ಟು ರಾಷ್ಟ್ರಪತಿಗಳ ಆದೇಶದ ಮೂಲಕ ಸಂವಿಧಾನಕ್ಕೆ ಸೇರಿಸಿದ ಆರ್ಟಿಕಲ್ 35ಎ ಅನುಬಂಧದಲ್ಲಿ ಮಾತ್ರ ಸಿಗುತ್ತದೆ.

## ಏನಿದು ಆರ್ಟಿಕಲ್ 35ಎ?

1954ರಲ್ಲಿ ಕೇಂದ್ರದ ನೆಹರೂ ಸರ್ಕಾರದ ನಿರ್ದೇಶದಂತೆ ರಾಷ್ಟ್ರಪತಿಯವರು 370ನೇ ವಿಧಿಯ ಅಡಿಯಲ್ಲಿ ಹೊರಡಿಸಿದ ಸಾಂವಿಧಾನಿಕ ಆದೇಶದ ಮೂಲಕ ಆರ್ಟಿಕಲ್ 35ಎ ಜಾರಿಗೆ ಸೇರಿಸಲ್ಪಟ್ಟಿತು. ಈ ಆದೇಶಕ್ಕೆ ಹಿನ್ನೆಲೆ ನೆಹರು ಮತ್ತು ಜಮ್ಮು ಕಾಶ್ಮೀರ ರಾಜ್ಯದ ವಿಲಯನದ ನಂತರ ರಾಜ್ಯದ ಆಡಳಿತ ಚುಕ್ಕಾಣಿ ಹಿಡಿದ ಶೇಕ್ ಅಬ್ದುಲ್ಲರ ನಡುವೆ 1952ರಲ್ಲಿ ನಡೆದ ಒಂದು ರಾಜಕೀಯ ಒಪ್ಪಂದ. ಇದು ದೆಹಲಿ ಒಪ್ಪಂದ ಎಂದೇ ಹೆಸರಾಗಿದೆ. ಆರ್ಟಿಕಲ್ 35ಎ ರಾಜ್ಯದ ಜನರನ್ನು ಖಾಯಂ ನಿವಾಸಿಗಳೆಂದು ವರ್ಗೀಕರಣ ಮಾಡುತ್ತದೆ. ಈ ವಿಧಿಯು ರಾಜ್ಯದ ಖಾಯಂ ನಿವಾಸಿಗಳಿಗೆ ರಾಜ್ಯ ಸರ್ಕಾರದ ನೌಕರಿ, ರಾಜ್ಯದಲ್ಲಿ ಸ್ಥಿರಾಸ್ತಿ ಹೊಂದಲು, ರಾಜ್ಯದಲ್ಲಿ ಖಾಯಂ ನಿವಾಸ ಮಾಡಲು ಮತ್ತು ಸರ್ಕಾರ ನೀಡುವ ವಿದ್ಯಾರ್ಥಿ ವೇತನ ಮೊದಲಾದ ಸವಲತ್ತಿನ ವಿಷಯಗಳಲ್ಲಿ ವಿಶೇಷ ಅಧಿಕಾರ ನೀಡುವುದಲ್ಲದೇ ರಾಜ್ಯದ ಖಾಯಂ ನಿವಾಸಿಗಳೆಂದು ಮಾನ್ಯತೆ ಪಡೆಯದ ದೇಶದ ಉಳಿದ



ನಾಗರಿಕರನ್ನು ಈ ಸವಲತ್ತುಗಳಿಂದ ಅನರ್ಹರನ್ನಾಗಿ ಮಾಡುತ್ತದೆ. ಅಂದರೆ ದೇಶದ ಉಳಿದ ನಾಗರಿಕರಾದವರು ಸಂವಿಧಾನ ನೀಡುವ ಮೂಲಭೂತ ಹಕ್ಕಿನ ಆಧಾರದ ಮೇಲೆ ದೇಶದ ಯಾವುದೇ ಮೂಲೆಯಲ್ಲಿ ಭೂಮಿ ಅಥವಾ ಸ್ಥಿರಾಸ್ತಿ ಖರೀದಿಸಿ, ಯಾವುದೇ ಉದ್ಯೋಗ ಮಾಡಿ ನೆಲೆಸಬಹುದಾದ ಅಧಿಕಾರ ಹೊಂದಿದ್ದರೂ ಜಮ್ಮು ಕಾಶ್ಮೀರದಲ್ಲಿ ಮಾತ್ರ ಇದು ಅನ್ವಯವಾಗುವುದಿಲ್ಲ!

## ಏಕೆ ಕಾನೂನು ಬಾಹಿರ?

- ಭಾರತೀಯ ಸಂವಿಧಾನದ ಆರ್ಟಿಕಲ್ 368ರಲ್ಲಿ ಸಂವಿಧಾನವನ್ನು ತಿದ್ದುಪಡಿ ಮಾಡುವ ಬಗೆಯನ್ನು ಹೇಳಲಾಗಿದ್ದು ಕೇವಲ ಸಂಸತ್ತಿಗೆ ಮಾತ್ರ ಸಂವಿಧಾನ ತಿದ್ದುಪಡಿ ಮಾಡುವ ಪರಮಾಧಿಕಾರವನ್ನು ನೀಡಲಾಗಿದೆ. ಹಾಗೆಯೇ ಆರ್ಟಿಕಲ್ 370 ಯಾವುದೇ ಕಾನೂನನ್ನು ರೂಪಿಸುವ ಅಧಿಕಾರವನ್ನು ರಾಷ್ಟ್ರಪತಿಯವರಿಗೆ ಕೊಡುವುದಿಲ್ಲ. ಆದರೆ ಆರ್ಟಿಕಲ್ 35ಎ ರಾಷ್ಟ್ರಪತಿಯವರ ಆದೇಶದ ಮೂಲಕ ಸಂವಿಧಾನಕ್ಕೆ ಹೊಸದಾಗಿ ಸೇರಿಸಲ್ಪಟ್ಟದ್ದಾಗಿದೆ. ಇದು ಸ್ಪಷ್ಟವಾಗಿ ಸಂವಿಧಾನದ ಮೂಲ ಚೌಕಟ್ಟಿನ ಮಿತಿಯ ಉಲ್ಲಂಘನೆಯಾಗಿದೆ.
- ಹಾಗೆಯೇ ಸಂಸತ್ತಿನ ಅನುಮೋದನೆಯಿಲ್ಲದೇ ಹಾಗೂ ಸಂಸತ್ತಿನ ಮುಂದೆ ಈ ವಿಷಯವನ್ನು ಇಡದೇ ಜಮ್ಮು ಕಾಶ್ಮೀರ ರಾಜ್ಯಕ್ಕೆ ಅನ್ವಯ ಆಗುವಂತೆ ಆರ್ಟಿಕಲ್ 35ಎಯನ್ನು ಸೇರಿಸಿದ್ದು ಆರ್ಟಿಕಲ್ 368 ಸಂಸತ್ತಿಗೆ ನೀಡುವ ತಿದ್ದುಪಡಿ ಮಾಡುವ ಅಧಿಕಾರವನ್ನು ಕಸಿದುಕೊಂಡಂತೆ. ಸಂಸತ್ತು ಇಡೀ ಭಾರತೀಯ ನಾಗರಿಕರನ್ನು ಪ್ರತಿನಿಧಿಸುತ್ತದೆ, ಆದರೆ ರಾಷ್ಟ್ರಪತಿಗಳ ಆದೇಶ ಕೇವಲ ಸರ್ಕಾರ ಅಂದರೆ ಅಧಿಕಾರದಲ್ಲಿರುವ ಕೆಲವರ ಪ್ರಭಾವಕ್ಕೆ ಒಳಗಾಗಿರುತ್ತದೆ.
- ಆರ್ಟಿಕಲ್ 35ಎನಲ್ಲಿ ರಾಜ್ಯದ ನಾಗರಿಕರನ್ನು ಖಾಯಂ ನಿವಾಸಿಗಳು ಎಂದು ವರ್ಗೀಕರಿಸಿ ಅವರಿಗೆ ವಿಶೇಷ ಸವಲತ್ತುಗಳನ್ನು ನೀಡುವುದು ಸಂವಿಧಾನದ ಆರ್ಟಿಕಲ್ 14ರಲ್ಲಿ ಹೇಳಿರುವ ಸಮಾನತೆಯ ಮೂಲಭೂತ ಹಕ್ಕಿಗೆ ವಿರುದ್ಧವಾಗಿದೆ. ಈ ವಿಧಿಯ ಪ್ರಕಾರ ಜಮ್ಮು ಕಾಶ್ಮೀರ ರಾಜ್ಯದ ಖಾಯಂ ನಿವಾಸಿಗಳಲ್ಲದವರು ರಾಜ್ಯದ ಖಾಯಂ ನಿವಾಸಿಗಳು ಅನುಭವಿಸುವ ಹಕ್ಕು ಮತ್ತು ಸವಲತ್ತುಗಳನ್ನು ಪಡೆಯಲು ಅನರ್ಹರು.

## ಆರ್ಟಿಕಲ್ 35ಎನಿಂದಾಗುತ್ತಿರುವ ಸಮಸ್ಯೆಗಳು

- ಇದು ಸಂವಿಧಾನ ನೀಡುವ ಸಮಾನತೆ ಮತ್ತು ಸ್ವಾತಂತ್ರ್ಯದ ಹಕ್ಕಿಗೆ ಸಂಪೂರ್ಣ ವಿರುದ್ಧವಾಗಿದೆ. ಜಮ್ಮು ಕಾಶ್ಮೀರದ ನಿವಾಸಿಯಾದವನು ಭಾರತದ ಯಾವುದೇ ರಾಜ್ಯದಲ್ಲಿ ಸ್ಥಿರಾಸ್ತಿ ಖರೀದಿಸಿ, ಉದ್ಯೋಗ ಮಾಡಿ ಖಾಯಂ ಆಗಿ ನೆಲೆಸಬಹುದು. ಆದರೆ ದೇಶದ ಉಳಿದ ನಾಗರಿಕರಿಗೆ ಜಮ್ಮು ಕಾಶ್ಮೀರ ರಾಜ್ಯದಲ್ಲಿ ಈ ಅಧಿಕಾರವಿಲ್ಲ. ಜಮ್ಮು ಕಾಶ್ಮೀರದ ನಿವಾಸಿ ಕೇಂದ್ರ ಅಥವಾ ಉಳಿದ ಯಾವುದೇ ರಾಜ್ಯ ಸರ್ಕಾರ ನೀಡುವ ಎಲ್ಲ ಸವಲತ್ತುಗಳನ್ನು ಪಡೆಯಬಹುದು. ಆದರೆ ಉಳಿದವರಿಗೆ ಜಮ್ಮು ಕಾಶ್ಮೀರ ರಾಜ್ಯದಲ್ಲಿ ಈ ಹಕ್ಕಿಲ್ಲ.
- ಈ ಆರ್ಟಿಕಲ್ ಹೇಳುವಂತೆ ಜಮ್ಮು ಕಾಶ್ಮೀರದ ಖಾಯಂ ನಿವಾಸಿಯಾದ ಯಾವುದೇ ಮಹಿಳೆಯು ಖಾಯಂ ನಿವಾಸಿಯಲ್ಲದವನನ್ನು ಮದುವೆಯಾದರೆ ಅವಳ ಮಕ್ಕಳಿಗೆ ಖಾಯಂ ನಿವಾಸಿಯ ಅಧಿಕಾರ ಸಿಗುವುದಿಲ್ಲ. ಹಾಗಾಗಿ ಆಕೆಯ ಮಕ್ಕಳು ಪಿತ್ರಾರ್ಜಿತ ಆಸ್ತಿಯನ್ನು ಉತ್ತರಾಧಿಕಾರಕ್ಕೆ ಅನರ್ಹರಾಗುತ್ತಾರೆ. ಇದು ಮಹಿಳೆಯನ್ನು ಆಕೆಯ ಇಷ್ಟದ ಗಂಡನನ್ನು ವರಿಸುವ ಅಧಿಕಾರದಿಂದ ವಂಚಿಸಿದಂತೆ.
- 1957ರಲ್ಲಿ ಪಂಜಾಬಿನಿಂದ ಸಫಾಯಿ ಕರ್ಮಚಾರಿ ಕೆಲಸಕ್ಕಾಗಿ ರಾಜ್ಯಕ್ಕೆ ಕರೆ ತರಲಾದ ವಾಲ್ಮೀಕಿ ಸಮುದಾಯದ ಸುಮಾರು 200 ಕುಟುಂಬಗಳಿಗೆ ಇನ್ನೂ ರಾಜ್ಯದ ಖಾಯಂ ನಿವಾಸಿಗಳೆಂಬ ಮಾನ್ಯತೆ ಸಿಕ್ಕಿಲ್ಲ. ನಾಲ್ಕು ತಲೆಮಾರು ಕಳೆದರೂ ಸರ್ಕಾರದ ಯಾವುದೇ ಸವಲತ್ತು ಅವರ ಹತ್ತಿರಕ್ಕೆ ಬಂದಿಲ್ಲ. ಪರಿಶಿಷ್ಟ ಜಾತಿ ಪಂಗಡಗಳಿಗೆ ಸೇರಿದ ಅವರ ಮಕ್ಕಳು ಇಂದಿಗೂ ಸಫಾಯಿ ಕರ್ಮಚಾರಿ ಕೆಲಸ ಬಿಟ್ಟು ಇನ್ನೇನೂ ಮಾಡುವಂತಿಲ್ಲ.
- ಸ್ಥಿರಾಸ್ತಿ ಖರೀದಿ ಮತ್ತು ಮಾಲೀಕತ್ವದ ನಿರ್ಬಂಧಗಳ ಪರಿಣಾಮವಾಗಿ ರಾಜ್ಯದ ಕೈಗಾರಿಕಾ ಕ್ಷೇತ್ರ ಮತ್ತು ಖಾಸಗೀ

## ನ್ಯಾಯಾಲಯದ ಅಂಗಳದಲ್ಲಿ

ಆರ್ಟಿಕಲ್ 35ಎಯನ್ನು ಸಂವಿಧಾನದಲ್ಲಿ ಸೇರಿಸಿದ್ದರ ವಿರುದ್ಧ ಮೊದಲಿನಿಂದಲೂ ಪ್ರಶ್ನೆ ಎತ್ತಲಾಗುತ್ತಿದೆ. 2015ರಲ್ಲಿ ಜಮ್ಮು ಕಾಶ್ಮೀರ ಅಧ್ಯಯನ ಕೇಂದ್ರ ಆರ್ಟಿಕಲ್ 35ಎಯ ಸಾಂವಿಧಾನಿಕ ಮಾನ್ಯತೆಯನ್ನು ಪ್ರಶ್ನಿಸಿ ದೆಹಲಿ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿತು. ನಂತರ ಸರ್ವೋಚ್ಚ ನ್ಯಾಯಾಲಯದಲ್ಲಿಯೂ ಕಾನೂನು ಸಮರ ಆರಂಭಿಸಲಾಯಿತು. ಇತ್ತೀಚೆಗೆ 'ವಿ ದ ಸಿಟಿಜನ್' ಎನ್ನುವ ಸರ್ಕಾರೇತರ ಸಂಸ್ಥೆಯು ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಪ್ರಕರಣವನ್ನು ದಾಖಲಿಸಿದ್ದು ಆರ್ಟಿಕಲ್ 35ಎ ಮತ್ತು 370 ರಾಜ್ಯದ ನಿವಾಸಿಗಳಲ್ಲದವರಿಗೆ ತಾರತಮ್ಯ ಮಾಡುತ್ತದೆ ಆದ್ದರಿಂದ ಇದನ್ನು ಅನೂರ್ಜಿತಗೊಳಿಸಬೇಕು ಎಂದು ಆಗ್ರಹ ಮಾಡಿದೆ. ಈ ಪ್ರಕರಣವನ್ನು ಕೈಗೆತ್ತಿಕೊಂಡಿರುವ ಸರ್ವೋಚ್ಚ ನ್ಯಾಯಾಲಯವು ಈ ಕುರಿತು ಕೇಂದ್ರ ಸರ್ಕಾರಕ್ಕೆ ಸ್ಪಷ್ಟನೆ ನೀಡುವಂತೆ ಕೇಳಿದ್ದು ಪಂಚ ನ್ಯಾಯಾಧೀಶರಿರುವ ಸಂವಿಧಾನ ಪೀಠವನ್ನು ರಚನೆ ಮಾಡಿ ವಿಚಾರಣೆ ನಡೆಸುವ ಸುಳಿವು ನೀಡಿದೆ.

ಕ್ಷೇತ್ರಗಳು ತೀವ್ರ ಸಂಕಷ್ಟಕ್ಕೊಳಗಾಗಿದೆ. ಹೊರರಾಜ್ಯಗಳಿಂದ ಯಾವುದೇ ಹೂಡಿಕೆ ಬರುವುದಿಲ್ಲ. ಆರೋಗ್ಯ ಕ್ಷೇತ್ರದಲ್ಲೂ ಇದೇ ಸಮಸ್ಯೆಯಿದ್ದು ಉತ್ತಮ ವೈದ್ಯರ ಕೊರತೆ ಬಹಳವಾಗಿದೆ.

- ಖಾಯಂ ನಿವಾಸಿಗಳಲ್ಲದವರ ಮಕ್ಕಳಿಗೆ ರಾಜ್ಯದ ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶವೇ ಇಲ್ಲ.
- ದೇಶ ವಿಭಜನೆಯ ಸಮಯದಲ್ಲಿ ಪೂರ್ವ ಪಾಕಿಸ್ತಾನದಿಂದ ನಿರಾಶ್ರಿತರಾಗಿ ಜಮ್ಮುವಿನಲ್ಲಿ ನಿರಾಶ್ರಿತ ಶಿಬಿರಗಳಲ್ಲಿ ಬಂದು ನೆಲೆಸಿದ ಲಕ್ಷಾಂತರ ಜನರ ಪಾಡು ಹೇಳತೀರದು. ಏಳು ದಶಕಗಳ ನಂತರವೂ ರಾಜ್ಯದ ಖಾಯಂ ನಿವಾಸಿಗಳೆಂದು ಮಾನ್ಯತೆ ಪಡೆಯದ ಇವರು ಅತೀ ಅವಶ್ಯಕ ಮೂಲಭೂತ ಸವಲತ್ತಿನಿಂದಲೂ ವಂಚಿತರು. ಇದರಿಂದಾಗಿ ರಾಜ್ಯದಲ್ಲಿ ಸುಮಾರು 20 ಲಕ್ಷ ಜನರು ಇನ್ನೂ ನಿರಾಶ್ರಿತರ ಶಿಬಿರಗಳಲ್ಲಿ ಆಶ್ರಯಿಸಿದ್ದಾರೆ.
- ರಾಜ್ಯದ ಖಾಯಂ ನಿವಾಸಿಗಳ ಮಾನ್ಯತೆ ಪಡೆದವರು ಮತ್ತು ದೇಶದ ಇತರ ನಾಗರಿಕರ ನಡುವೆ ತಾರತಮ್ಯ ನಡೆಸಲು ಇದು ರಾಜ್ಯ ಸರ್ಕಾರ ಮತ್ತು ರಾಜಕಾರಣಿಗಳಿಗೆ ಮುಕ್ತ ಅವಕಾಶ ನೀಡುತ್ತದೆ. ದೇಶದ ಇತರ ನಾಗರಿಕರಿಗೆ ಆಸ್ತಿ ಖರೀದಿ, ಸ್ಥಳೀಯ ಚುನಾವಣೆಗಳಲ್ಲಿ ಮತದಾನದ ಅಧಿಕಾರ, ಸರ್ಕಾರಿ ನೌಕರಿ ಮೊದಲಾದವುಗಳಲ್ಲಿ ನಿರ್ಬಂಧ ಇರುವ ಕಾರಣ ಅವರನ್ನು ಕಡೆಗಣಿಸುವ ಕೆಲಸ ಮೊದಲಿನಿಂದ ಪಕ್ಷಾತೀತವಾಗಿ ಯಾವುದೇ ಸರ್ಕಾರ ಬಂದರೂ ನಡೆದು ಬಂದಿದೆ.

ಹಿಂಬಾಗಿಲಿನಿಂದ ಭಾರತೀಯ ಸಂವಿಧಾನದೊಳಗೆ ಪ್ರವೇಶ ಪಡೆದ ಆರ್ಟಿಕಲ್ 35ಎ ರಾಜ್ಯದ ಪ್ರತ್ಯೇಕತೆಗೆ ಇಂಬು ಕೊಡುವುದರ ಜೊತೆಗೆ ರಾಜ್ಯದ ಖಾಯಂ ನಿವಾಸಿಗಳಲ್ಲದವರೊಂದಿಗೆ ತಾರತಮ್ಯ ಮಾಡುತ್ತ ಬಂದಿದೆ. ಜೊತೆಗೆ ಇದು ಜಮ್ಮು ಕಾಶ್ಮೀರದ ಆರ್ಥಿಕ ಹಾಗೂ ಸರ್ವಾಂಗೀಣ ಪ್ರಗತಿಗೆ ಮುಖ್ಯ ಅಡೆತಡೆಯೂ ಹೌದು.

---

**ಹೆಸರು :** ರಾಠಿ. (ಸಿಂಧಿ, ಥಾರ್ಪಾರ್ಕರ್, ಸಾಹಿವಾಲ್ ತಳಿಗಳಿಂದ ಜನಿಸಿದ ದೇಸಿ ಗೋತಳಿ)

**ಮೂಲ :** ಪಶ್ಚಿಮ ರಾಜಸ್ಥಾನ, ಆಲ್ವಾರ್ ಜಿಲ್ಲೆಯ ರಠ್ ಹೆಸರಿನ ರಜಪೂತ ಮುಸ್ಲಿಂ ಸಮುದಾಯದ ಜನರು ಇದನ್ನು ಹೆಚ್ಚು ಸಾಕುತ್ತಾರೆ. ಈ ತಳಿಯಿಂದಲೇ ಅವರಿಗೆ "ರಠ್" ಎನ್ನುವ ಹೆಸರು ಬಂದಿದೆ ಎಂದೂ ಹೇಳಲಾಗುತ್ತದೆ.

**ರೂಪ :** ಗಾತ್ರದಲ್ಲಿ ಹಿರಿದು. ಬಹುತೇಕ ಕಂದು ಬಣ್ಣ ಹೊಂದಿರುತ್ತವೆ. ಮೈ ಮೇಲೆ ಬಿಳಿಯ ಮಚ್ಚೆಗಳು ಕಾಣಸಿಗುತ್ತವೆ.

**ವಿಶೇಷತೆ :** ಹಸುಗಳು ಹೆಚ್ಚಿನ ಪ್ರಮಾಣದ ಹಾಲನ್ನು ಕೊಡುತ್ತವೆ. ಹೋರಿಗಳು ಕಟ್ಟುಮಸ್ತಾಗಿದ್ದು ಮರುಭೂಮಿಯಲ್ಲೂ ಹಾಗೆಯೇ ಗಟ್ಟಿ ನೆಲದ ಜಾಗಗಳಲ್ಲೂ ಹತ್ತು ತಾಸಿಗೂ ಅಧಿಕ ಸಮಯ ಬಿಡದೆ ದುಡಿಯಬಲ್ಲವು. ಈ ತಳಿಯ ದನಗಳು ರಾಜಸ್ಥಾನದ ಬಿಕನೆರ್‌ನಂತಹ ಅತಿಹೆಚ್ಚು ತಾಪಮಾನದ ಪ್ರದೇಶದಲ್ಲೂ ಬಾಳಬಲ್ಲವು.

**ಹಾಲಿನ ಪ್ರಮಾಣ :** ಒಂದು ಕರಾವಿನಲ್ಲಿ ಸರಾಸರಿ 1600 ಲೀಟರ್. 4800ಲೀ. ವರೆಗೆ ಹಾಲು ನೀಡಿದ ಉದಾಹರಣೆಯೂ ಇದೆ.



# ದೀನ್‌ದಯಾಳ್‌ಜೀ ಸ್ಮರಣೆ



ರಾಷ್ಟ್ರಹಿತ ಚಿಂತಕನಾಗಿ, ಸಮಾಜಸೇವಕನಾಗಿ ಹಾಗೆಯೇ ಸಮರ್ಥ ಸಂಘಟಕನಾಗಿ ಚಿರಪರಿಚಿತರಾದ ಪಂಡಿತ ದೀನದಯಾಳ್ ಉಪಾಧ್ಯಾಯ್ ಓರ್ವ ಪತ್ರಕರ್ತರಾಗಿಯೂ ಸಹ ಪ್ರಸಿದ್ಧರು.


ಸ್ವಾತಂತ್ರ್ಯದ ಸಂಘರ್ಷ ತೀವ್ರವಾಗಿದ್ದ ಆ ಸಮಯದಲ್ಲಿ ಪತ್ರಿಕೋದ್ಯಮವೂ ಹೋರಾಟದ ಒಂದು ಪ್ರಬಲ ಮಾಧ್ಯಮವಾಗಿತ್ತು. ರಾಷ್ಟ್ರೀಯ ವಿಚಾರಗಳನ್ನು ಜನರಿಗೆ ತಲುಪಿಸಲು ಹಾಗೂ ಸಾಮಾಜಿಕ ಜಾಗೃತಿಯಲ್ಲಿ ಪತ್ರಿಕೆಗಳು ಅತ್ಯಂತ ಪ್ರಮುಖ ಪಾತ್ರವಹಿಸುತ್ತಿದ್ದ ಕಾಲ ಅದು. ಸಹಜವಾಗಿ ದೀನದಯಾಳರಿಗೆ ಪತ್ರಿಕೋದ್ಯಮದಲ್ಲಿ ಒಲವು ಮೂಡಿತ್ತು. ಪತ್ರಿಕಾ ಮಾಧ್ಯಮದ ಪ್ರಭಾವವನ್ನು ಮನಗಂಡಿದ್ದ ದೀನದಯಾಳ್ 1940ರಲ್ಲಿ ಲಖ್ನೋದಲ್ಲಿ ರಾಷ್ಟ್ರಧರ್ಮ ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು.

ನಂತರ ಅವರು ಪಾಂಚಜನ್ಯ, ಸ್ವದೇಶ ಹಾಗೂ ಆರ್ಗನೈಸರ್‌ನಂತಹ ಪತ್ರಿಕೆಗಳಲ್ಲೂ ನಿಯಮಿತವಾಗಿ ಲೇಖನಗಳನ್ನು, ಅಂಕಣಗಳನ್ನು ಬರೆಯುತ್ತಿದ್ದರು. ರಾಜಕೀಯ ಪ್ರವೇಶಕ್ಕೂ ಮುನ್ನ ಅನೇಕ ವರ್ಷಗಳ ಕಾಲ ಸಂಪಾದಕರಾಗಿದ್ದ ದೀನದಯಾಳರು ಒಬ್ಬ ನಿಷ್ಠುರ ಆದರೆ ಸಂಯಮಶೀಲ ಮತ್ತು ಎಲ್ಲಿಯೂ ಸಭ್ಯತೆಯನ್ನು ಮೀರದ ಪತ್ರಕರ್ತರಾಗಿದ್ದರು. ಅವರ ಬರವಣಿಗೆಗಳು ನಿಷ್ಠುರವಾಗಿ, ಹರಿತವಾಗಿರುತ್ತಿದ್ದರೂ ಒಮ್ಮೆಯೂ ಸಭ್ಯತೆಯ ಎಲ್ಲೆ ಮೀರಿದ ಉದಾಹರಣೆ ಇಲ್ಲ. ಒಂದು ಬಾರಿ ನೆಹರೂರವರ ಧೋರಣೆಗಳ ಬಗ್ಗೆ ತುಸು ಒರಟಾದ ಖಂಡನೀಯ ಲೇಖನ ಆರ್ಗನೈಸರ್ ಪತ್ರಿಕೆಯಲ್ಲಿ ಪ್ರಕಟವಾದಾಗ ಅದನ್ನು ಓದಿದ ದೀನದಯಾಳರು ಆ ಲೇಖನವನ್ನು ಬರೆದ ಪತ್ರಕರ್ತನನ್ನು ಕರೆದು "ನಿಮ್ಮ ಲೇಖನ ತುಂಬಾ ಚೆನ್ನಾಗಿದೆ ಆದರೆ ನೆಹರೂರವರನ್ನು ಉದ್ದೇಶಿಸಿ ಬರೆಯುವಾಗ ಉಪಯೋಗಿಸುವ ಶಬ್ದಗಳ ಮೇಲೆ ವಿಶೇಷ ಗಮನ ಬಹಳ ಮುಖ್ಯ, ಎಷ್ಟೇ ಆದರೂ ಅವರು ನಮ್ಮ ದೇಶದ ಪ್ರಧಾನಮಂತ್ರಿ ಅಲ್ಲವೇ, ಅವರಿಗೆ ಅಗೌರವ ಎಂದೂ ಸಲ್ಲ" ಎಂದು ತಿಳಿ ಹೇಳಿದ್ದರು. ಅವರ ಪತ್ರಿಕಾಧರ್ಮ ನಿರ್ವಹಣೆ ಎಂತವರನ್ನೂ ಪ್ರಭಾವಗೊಳಿಸುವಂತಿತ್ತು.

1961 ಸಮಯದಲ್ಲಿ ಚೀನಾದ ಆಕ್ರಮಣಕಾರಿ ನೀತಿಯ ನಡುವೆ ದೇಶದೆಲ್ಲೆಡೆ ಅನೇಕ ಕಾರ್ಮಿಕಪರ ಕಮ್ಯುನಿಸ್ಟ್ ಸಂಘಟನೆಗಳು ರೈಲು ಉದ್ಯೋಗಿಗಳ ಸಂಬಂಧ ಮುಷ್ಕರ ಹಾಗೂ ಚಳುವಳಿಗಳನ್ನು ಪ್ರಾರಂಭಿಸಿದ್ದವು. ಭಾರತೀಯ ಜನಸಂಘ ಪಕ್ಷವೂ ಕೂಡ ರಾಜಕೀಯ ಕಾರಣಗಳಿಂದ ಇದಕ್ಕೆ ಬೆಂಬಲ ನೀಡಿತ್ತು. ಆ ಸಂದರ್ಭದಲ್ಲಿ ಆರ್ಗನೈಸರ್ ಪತ್ರಿಕೆ ದೇಶದ ಹಿತವನ್ನು ದೃಷ್ಟಿಯಲ್ಲಿಟ್ಟು ಜನಸಂಘದ ಈ ನಿಲುವನ್ನು ಖಂಡಿಸಿ ಲೇಖನಗಳನ್ನು ಪ್ರಕಟಿಸಿತ್ತು. ಇದರಿಂದ ಬೇಸರಗೊಂಡ ಜನಸಂಘದ ಕಾರ್ಯಕರ್ತರು ಆಗ ಜನಸಂಘದ ಕಾರ್ಯದರ್ಶಿಯಾಗಿದ್ದ ದೀನದಯಾಳರ ಬಳಿ ವಿಚಾರವನ್ನು ತೆಗೆದುಕೊಂಡು ಹೋದಾಗ, ಪತ್ರಿಕೆ ಹಾಗೂ ಪಕ್ಷ ಎರಡೂ ಕಡೆಯವರನ್ನೂ ಕೂರಿಸಿಕೊಂಡು, "ರಾಷ್ಟ್ರ ಹಿತದ ಪ್ರಶ್ನೆ ಬಂದಾಗ ಪತ್ರಿಕೆಯ ಸಿದ್ಧಾಂತಗಳಲ್ಲಿ ಯಾವುದೇ ರಾಜಿ ಸರಿಯಲ್ಲ ಮತ್ತು ಪಕ್ಷದ ಹಿತವನ್ನು ಅನುಸರಿಸಿ ನೀವು ನಡದುಕೊಂಡಿದ್ದೂ ಸರಿಯಾಗಿಯೇ ಇದೆ" ಎಂದು ಹೇಳಿ ಎರಡೂ ಕಡೆಯವರನ್ನು ಸಮಾಧಾನ ಮಾಡಿದರು. ಪತ್ರಿಕೆ ಮಾಧ್ಯಮಗಳ ಸ್ವಾತಂತ್ರ್ಯವನ್ನು ಸದಾ ಗೌವರವಿಸುತ್ತಿದ್ದ ಅವರು ರಾಷ್ಟ್ರಹಿತದ ವಿಷಯದಲ್ಲಿ ಪತ್ರಿಕೆಯ ಧ್ಯೇಯ ಹಾಗೂ ವೈಚಾರಿಕತೆಯಲ್ಲಿ ಯಾವುದೇ ರಾಜಿ ಕೂಡದು ಎನ್ನುವುದನ್ನು ಪ್ರಬಲವಾಗಿ ಪ್ರತಿಪಾದಿಸುತ್ತಿದ್ದರು.

# ಆಚಾರ್ಯ ವಿನೋಬಾ ಭಾವೆ

**(ಸೆಪ್ಟಂಬರ್ 11, 1895 – ನವಂಬರ್ 15, 1982)**



ಆಚಾರ್ಯ ವಿನೋಬಾ ಭಾವೆ ಭೂದಾನ ಚಳವಳಿಯ ಹರಿಕಾರರಾಗಿ ಖ್ಯಾತನಾಮರು. ಅಪ್ಪಟ ಗಾಂಧಿವಾದಿ ಸ್ವಾತಂತ್ರ್ಯ ಹೋರಾಟಗಾರರು. ವಿನೋಬಾ ಮಹಾರಾಷ್ಟ್ರದ ಗಾಗೋಡೆ ಗ್ರಾಮದಲ್ಲಿ ಸೆಪ್ಟೆಂಬರ್ 11, 1895ರಂದು ಜನಿಸಿದರು. ಇವರ ತಂದೆ ನರಹರಿ ಶಂಭುರಾವ್ ಭಾವೆ. ತಾಯಿ ರುಕ್ಮಿಣಿ ದೇವಿ. ಅವರ ಮೂಲನಾಮ ವಿನಾಯಕ್ ನರಹರಿ ಭಾವೆ. ಅವರಿಗೆ ಗಣಿತದಲ್ಲಿ ಅಪಾರ ಆಸಕ್ತಿ ಇತ್ತು. 1916ರಲ್ಲಿ ಇಂಟರ್ ಮೀಡಿಯೆಟ್ ಪರೀಕ್ಷೆಗಾಗಿ ಮುಂಬೈಗೆ ಹೊರಟಿದ್ದ ವಿನೋಬಾ ಭಾವೆ ಅವರಿಗೆ ಮಹಾತ್ಮ ಗಾಂಧಿಯವರ ಬರಹವೊಂದು ಕಣ್ಣಿಗೆ ಬಿತ್ತು. ಗಾಂಧಿಯವರ ವಿಚಾರದಿಂದ ಪ್ರೇರಿತರಾಗಿ ತಾವು ಗಳಿಸಿದ್ದ ಪದವಿ ಪ್ರಮಾಣ ಪತ್ರಗಳಿಗೆಲ್ಲ ಬೆಂಕಿಗೆ ಹಚ್ಚಿ ಗಾಂಧಿಜೀಯವರ ಅನುಯಾಯಿಯಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದರು. ವಿನೋಬಾ ಭಾವೆ ತ್ರಿಕರಣ ಪೂರ್ವಕ ಸತ್ಯಾಗ್ರಹಿ. ಅಹಿಂಸಾ ಮಾರ್ಗದಲ್ಲಿ ಅಪ್ರತಿಮ ನಿಷ್ಠೆ ಇದ್ದವರು. ನಾಗಪುರದ ಧ್ವಜಸತ್ಯಾಗ್ರಹದಲ್ಲಿ ತಿಂಗಳಾನುಗಟ್ಟಲೆ ಬಂಧಿತರಾದರು ಮತ್ತು ಕೇರಳದ ವೈಕೋಮ್ ಸತ್ಯಾಗ್ರಹಕ್ಕೆ ಹೊರಟುನಿಂತರು. ಇವೆಲ್ಲದರ ನಡುವೆಯೂ ನಿರಂತರ ಅಧ್ಯಯನಶೀಲರಾಗಿದ್ದ ಅವರು ಮರಾಠಿಯಲ್ಲಿ ಗೀತಾಭಾಷ್ಯ ಬರೆದರು. ತಿಂಗಳುಗಟ್ಟಲೆ ಜೈಲಿನಲ್ಲಿದ್ದಾಗ ತಮ್ಮ ಸಹ ಖೈದಿಗಳಿಗೆ ಪ್ರವಚನ ನೀಡುತ್ತಿದ್ದರು.

1948ರಲ್ಲಿ ಗಾಂಧಿಜೀಯವರ ಮರಣಾನಂತರ ಆಚಾರ್ಯ ವಿನೋಬಾ ಭಾವೆ ಸರ್ವೋದಯ ಪರಿಕಲ್ಪನೆಯಲ್ಲಿ ಗ್ರಾಮ ಸುಧಾರಣೆ ಮಾಡಲು ಭಾರತದ ದರ್ಶನಕ್ಕಾಗಿ ಕಾಲ್ನಡಿಗೆ ಪ್ರವಾಸ ಹೊರಟರು. 1951 ಏಪ್ರಿಲ್ 18ರಂದು ಆಂಧ್ರದ ತೆಲಂಗಾಣ ಪ್ರಾಂತ್ಯದ ಪೂಚಂಪಲ್ಲಿ ಎಂಬಲ್ಲಿ ಭಾಷಣ ಮಾಡುತ್ತಾ, "ಶ್ರೀಮಂತ ಜಮೀನ್ದಾರರು ತಮ್ಮಲ್ಲಿರುವ ಜಮೀನುಗಳನ್ನು ಬಡವರಿಗೆ ದಾನ ಮಾಡಬೇಕು. ಇದು ಯಾವ ಕಾರಣಕ್ಕೂ ನಿಮ್ಮ ಮನಸ್ಸಿನಲ್ಲಿ ಭಿಕ್ಷೆ ಎಂಬ ಭಾವನೆ ಮೂಡಕೂಡದು, ಬಡತನ ಹೋಗಲಾಡಿಸಲು ಹಾಗೂ ದುಡಿಯುವ ಕೈಗಳಿಗೆ ಉದ್ಯೋಗ ಕಲ್ಪಿಸುವ ದೀಕ್ಷೆ ಎಂದು ಭಾವಿಸಬೇಕು" ಎಂದು ಕರೆಯಿತ್ತರು. ವಿನೋಬಾರ ಮಾತುಗಳಿಂದ ಪ್ರಭಾವಿತನಾದ ರಾಮರೆಡ್ಡಿ ಎಂಬ ಜಮೀನ್ದಾರ ಸ್ಥಳದಲ್ಲೇ ನೂರು ಎಕರೆ ಭೂಮಿಯನ್ನು ವಿನೋಬಾರವರಿಗೆ ದಾನ ಮಾಡಿದ.

"ನೀವು ನೀಡುವ ಜಮೀನಿನಲ್ಲಿ ಯಾವ ಕಾರಣಕ್ಕೂ ದೇಗುಲ, ಛತ್ರ, ಅಥವಾ ಶಿಕ್ಷಣ ಸಂಸ್ಥೆಗಳನ್ನು ನಿರ್ಮಿಸುವುದಿಲ್ಲ. ಹಸಿವು ಮತ್ತು ಬಡತನದಿಂದ ಬಳಲುತ್ತಿರುವ ಭಾರತದ ಬಡವರು ನಮ್ಮ ಪಾಲಿನ ನಿಜವಾದ ದೇವರಾಗಿದ್ದಾರೆ. ನೀವು ದಾನ ನೀಡುವ ಜಮೀನು ಅವರಿಗೆ ಸಲ್ಲುತ್ತದೆ" ಎಂದು ಘೋಷಿಸುತ್ತಾ ಹೋದರು. ಮೊದಲ 70 ದಿನಗಳ ಪ್ರವಾಸದಲ್ಲಿ 12 ಸಾವಿರ ಎಕರೆ ಭೂಮಿ ದಾನವಾಗಿ ದೊರೆತರೆ, ನಂತರದ 60 ದಿನಗಳಲ್ಲಿ 18 ಸಾವಿರ ಎಕರೆ ಭೂಮಿ ದೊರೆಯಿತು. ಮೊದಲ ಹಂತದ 800 ಕಿಲೋಮೀಟರ್ ಪಾದಯಾತ್ರೆಯಲ್ಲಿ 30 ಸಾವಿರ ಎಕರೆ ಭೂಮಿಯು ಭೂದಾನವಾಗಿ ದೊರಕಿತು. ಸುಮಾರು ಹದಿಮೂರು ವರ್ಷಗಳ ಕಾಲ ಪಾದಯಾತ್ರೆ ನಡೆಸಿದ ವಿನೋಬಾ ಭಾವೆ ದೇಶದ ಮೂಲೆ ಮೂಲೆ ಸಂಚರಿದರು, 43 ಸಾವಿರ ಮೈಲಿ ಕಾಲ್ನಡಿಗೆಯಲ್ಲಿ ಸವೆಸಿದರು. ಭೂಮಿ ಉಳ್ಳವರಿಂದ ಲಕ್ಷಾಂತರ ಎಕರೆ ಭೂಮಿಯನ್ನು ದಾನ ಪಡೆದು ಇಲ್ಲದವರಿಗೆ ನೀಡಿದರು. ತಮಿಳುನಾಡು ಒಂದರಲ್ಲೇ ಅವರು ಸುಮಾರು 175 ಹಳ್ಳಿಗಳನ್ನು ಭೂರಹಿತ ಬಡಜನರಿಗೆ ಹಸ್ತಾಂತರಿಸಿದರು.

ವಿನೋಬಾ ಭಾವೆ ಕಾಲ್ನಡಿಗೆಯಲ್ಲಿ ಕರ್ನಾಟಕದಲ್ಲಿಯೂ ಸಂಚರಿಸಿದರು. ಶಿವಮೊಗ್ಗದ ಸೊರಬ ತಾಲ್ಲೂಕಿನ ಎಣ್ಣೆಕೊಪ್ಪದ ಮಲ್ಲಿಕಾರ್ಜುನಪ್ಪ ಗೌಡ ಎನ್ನುವ ಜಮೀನ್ದಾರರು ಭಾವೆಯವರ ಸದಾಶಯಕ್ಕೆ ಮಾರುಹೋಗಿ ಸಾವಿರ ಎಕರೆ ಜಮೀನನ್ನು ದಾನ ಮಾಡಿದ್ದರು. ಕರ್ನಾಟಕದಲ್ಲಿಯೂ ಭಾವೆಯವರ ಪಾದಯಾತ್ರೆಗೆ "ಭೂದಾನ" ಚಳವಳಿಗೆ ಉತ್ತಮವಾದ ಸ್ಪಂದನೆ ದೊರಕಿತು.

ಸಂತರಂತೆ ಬಾಳಿದ ವಿನೋಬಾರ ಅಂತಃಸತ್ವ ಬಹಳ ಪ್ರಭಾವಶಾಲಿಯಾಗಿತ್ತು, 1960ರಲ್ಲಿ ಚಂಬಲ್ ಕಣಿವೆಯ ಡಕಾಯಿತರು, 1972ರಲ್ಲಿ ವಿವಿಧ ಭಾಗದ ನೂರಾರು ಡಕಾಯಿತರು ಅವರಿಗೆ ಶರಣುಬಂದಿದ್ದು ಅದಕ್ಕೊಂದು ಉದಾಹರಣೆ. 1952ರಲ್ಲಿ ನೆಹರೂರವರು ವಿನೋಬಾ ಅವರನ್ನು ದೆಹಲಿಗೆ ಆಹ್ವಾನಿಸಿ, ಪಂಚವಾರ್ಷಿಕ ಯೋಜನೆಗಳಲ್ಲಿ ಗ್ರಾಮಾಭಿವೃದ್ಧಿಯ ಕುರಿತು ಯಾವ ರೀತಿಯ ಯೋಜನೆಗಳು ಇರಬೇಕೆಂದು ಕೇಳಿದಾಗ ಆಚಾರ್ಯರು ನೀಡಿದ ಉತ್ತರ ಹೀಗಿತ್ತು. "ಬಡವರ ಹಸಿವನ್ನು ನೀಗಿಸಿಲಾಗದ, ದುಡಿಯುವ ಕೈಗಳಿಗೆ ಕೆಲಸ ನೀಡಲಾಗದ ನಿಮ್ಮ ಪಂಚವಾರ್ಷಿಕ ಯೋಜನೆಗಳನ್ನು ಕಸದ ಬುಟ್ಟಿಗೆ ಬಿಸಾಡಿ. ಮೊದಲು ನೀವು, ನಿಮ್ಮ ಪರಿವಾರ ದೆಹಲಿ ಬಿಟ್ಟು ಹಳ್ಳಿಗಳತ್ತ ಹೊರಡಿ. ಅಲ್ಲಿ ದರ್ಶನವಾಗುವ ನರಕ ಸದೃಶ್ಯ ಬದುಕು ನಿಮಗೆ ದಾರಿ ತೋರಿಸುತ್ತದೆ" ಎಂದಿದ್ದರು.

ಆಚಾರ್ಯ ವಿನೋಬಾ ಬಹುಭಾಷಾ ಪಂಡಿತರಾಗಿದ್ದು ಮರಾಠಿ, ಹಿಂದಿ, ಉರ್ದು, ಇಂಗ್ಲಿಷ್, ಕನ್ನಡ ಭಾಷೆಗಳ ಪರಿಚಯ ಅವರಿಗಿತ್ತು. ಕನ್ನಡದ ಲಿಪಿ ಅವರನ್ನು ಮೋಡಿ ಮಾಡಿತ್ತು. ಕನ್ನಡದ ಲಿಪಿಯನ್ನು 'ಲಿಪಿಗಳ ರಾಣಿ' ಎಂದು ಬಣ್ಣಿಸಿದ್ದರು. 1982ರ ವರ್ಷದಲ್ಲಿ ಅವರು ತೀವ್ರ ಅನಾರೋಗ್ಯದಿಂದಿದ್ದರೂ ಯಾವುದೇ ರೀತಿಯ ಔಷಧೋಪಚಾರ ಸ್ವೀಕರಿಸಲು ಒಪ್ಪದೆ ನವೆಂಬರ್ 15, 1982ರಂದು ವಿಧಿವಶರಾದರು. 1983ರಲ್ಲಿ ಅವರಿಗೆ ಮರಣೋತ್ತರವಾಗಿ ಭಾರತರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

**ಸಂಪಾದಕೀಯ ಸಹಕಾರ** ಶೈಲೇಶ್ ಕುಲಕರ್ಣಿ, ಪ್ರವೀಣ್ ಪಟವರ್ಧನ್, ಶ್ರೀವತ್ಸ, ಶ್ರೀನಿವಾಸ್ ಹೆಗಡೆ, ರಾಧಾಕೃಷ್ಣ ಹೊಳ್ಳ, ಮೊಳಹಳ್ಳಿ ಅನಿಲಕುಮಾರ್, ಸತ್ಯನಾರಾಯಣ ಶಾನಭಾಗ್

## ಚಿಂದಿ ಆಯುವವ ಇಂದು 160 ಜನರಿಗೆ ಉದ್ಯೋಗದಾತ



ಜಯಪ್ರಕಾಶ್ ಚೌಧರಿ ಅಲಿಯಾಸ್ ಸಂತು 23 ವರ್ಷಗಳ ಹಿಂದೆ ದೆಹಲಿಗೆ ದಿನಕ್ಕೆ 150 ರೂಪಾಯಿ ಗಳಿಸುವ ಚಿಂದಿ, ಕಸ ಆಯುವ ಕಾರ್ಮಿಕನಾಗಿ ದೂರದ ಬಿಹಾರದಿಂದ ಬಂದಿದ್ದರು. ಕಸವನ್ನು ಪಡೆದು ಅದರಿಂದ ಪುನರ್ಬಳಕೆ ಮಾಡಬಹುದಾದ ವಸ್ತುಗಳನ್ನು ಆಯ್ದು ಪರಿಸರಕ್ಕೆ ತನ್ನದೇ ರೀತಿಯಲ್ಲಿ ಸೇವೆ ಸಲ್ಲಿಸುತ್ತ ನಿಯತ್ತಿನಿಂದ ಕೆಲಸಮಾಡುತ್ತಿದ್ದರೂ ತನ್ನೆಡೆ ಇತರರ ತಾರತಮ್ಯದ ನಡವಳಿಕೆಯಿಂದಾಗಿ ಬೇಸರಿಸಿಕೊಂಡು ತನ್ನೂರಿಗೆ ಮರಳಿದ್ದರು. ಆದರೆ ಮನೆಯಲ್ಲಿನ ಬಡತನಕ್ಕಿಂತ ತಾರತಮ್ಯದ ಕೆಲಸವೇ ಲೇಸೆಂದು ಮತ್ತೆ ದೆಹಲಿಗೆ ಮರಳಿದ ಸಂತುವಿನ ಜೀವನದಲ್ಲಿ ತಿರುವು ಬಂದಿದ್ದು 1999ರಲ್ಲಿ. ಅವರು ಕಸ ಆಯುವವರ ಒಳಿತಿಗಾಗಿ ಸಫಾಯಿ ಸೇನಾ ಆರಂಭಿಸಿದರು. ಚಿಂತನ್ ಎಂಬ ಹೆಸರಿನ ಸರ್ಕಾರೇತರ ಪರಿಸರ ಸಂರಕ್ಷಣಾ ಸಂಸ್ಥೆಯ ವತಿಯಿಂದ ದೊರೆತ ಸಹಕಾರದಿಂದ ತನ್ನಂತೆ ಕಸ ಆಯುವವರ ದೆಸೆ ಬದಲಾವಣೆಗೆ ಶ್ರಮವಹಿಸಿದರು. ಇಂದು ಸಂತುವಿನ ಆಶ್ರಯದಲ್ಲಿ 160 ಜನ ನೆಮ್ಮದಿಯ ಬದುಕು ಕಂಡುಕೊಂಡಿದ್ದಾರೆ ಅವರಲ್ಲಿ ಮಗನಿಂದ ಪರಿತ್ಯಕ್ತ 60 ವರ್ಷ ಮೇಲ್ಪಟ್ಟ ವೃದ್ಧೆಯರೂ ಸೇರಿದ್ದಾರೆ. ಜನರು ಬಿಸಾಡುವ ವಸ್ತುಗಳಿಂದ ಪುನರ್ಬಳಕೆಯ ವಸ್ತುಗಳನ್ನು ಆಯ್ದು ಪರಿಸರ ಸಂರಕ್ಷಣೆಗೆ ಸಹಾಯ ಮಾಡುವುದಲ್ಲದೆ ನಿರ್ಗತಿಕರಿಗೆ ಆಶ್ರಯವನ್ನೂ ಕೊಡುವ ಕೆಲಸ ಸಂತು ಅವರು ಮಾಡುತ್ತಿದ್ದಾರೆ.

## ಸಾಲುದ್ದದ ಸುದ್ದಿಗಳು



ಭಾರತದ ನೌಕಾಪಡೆಗೆ ಇದೀಗ ಐಎನ್‌ಎಸ್ ಕಲ್ವರಿ ಎಂಬ ಜಲಾಂತರ್ಗಾಮಿ ನೌಕೆ ಸೇರಲಿದೆ. 21 ದಿನಗಳ ಕಾಲ ನೀರಿನ ಮೇಲ್ಮೈಗೆ ಬರದೇ ಒಳಗೇ ಚಲಿಸುವ ಸಾಮರ್ಥ್ಯವಿರುವ ಈ ನೌಕೆ, ನೀರಿನೊಳಗಷ್ಟೇ ಅಲ್ಲದೇ ಮೇಲೆ ಇರುವ ಶತ್ರುಗಳ ಮೇಲೂ ದಾಳಿ ಮಾಡುವ ಕ್ಷಮತೆ ಹೊಂದಿದೆ. ಇಂತಹ 6 ನೌಕೆಗಳನ್ನು ಫ್ರಾನ್ಸ್ ಕಂಪೆನಿಯ ಸಹಯೋಗದೊಂದಿಗೆ ಮಡಗಾಂವ್ ಡಾಕ್ ಸಂಸ್ಥೆ ನಿರ್ಮಾಣ ಮಾಡುತ್ತಿದೆ. ಭಾರತದ ಬಳಿ ಈಗ 15 ಜಲಾಂತರ್ಗಾಮಿ ನೌಕೆಗಳಿದ್ದರೆ ಚೀನಾದ ಬಳಿ ಇಂತಹ 60 ನೌಕೆಗಳಿವೆ ಎಂದು ಅಂದಾಜು ಮಾಡಲಾಗಿದೆ. ಹಾಗಾಗಿ, ಈ ಹೊಸ ಜಲಾಂತರ್ಗಾಮಿಯ ಸೇರ್ಪಡೆಯಿಂದ ಸೇನೆಗೆ ಹೆಚ್ಚಿನ ಬಲ ಬಂದಂತಾಗಿದೆ.

**ತ್ರಿವಳಿ ತಲಾಖ್ ವಿರುದ್ಧ ದನಿಯೆತ್ತಿದ ಪ್ರಧಾನಿ ಮೋದಿ ಮತ್ತು ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಿಗೆ ಉತ್ತರಪ್ರದೇಶದ ಮುಸ್ಲಿಂ ಮಹಿಳೆಯರು ರಕ್ಷಾಬಂಧನ ಸಮಯದಲ್ಲಿ ರಾಖಿ ಕಳುಹಿಸಿ ಶುಭಕೋರಿದ್ದಾರೆ. ತ್ರಿವಳಿ ತಲಾಖ್‌ನಿಂದ ಆಗುತ್ತಿರುವ ಅನ್ಯಾಯದ ಬಗ್ಗೆ ಮೋದಿ ಅವರು ಮಾತನಾಡಿ ಪಕ್ಷಾತೀತವಾಗಿ ಎಲ್ಲರೂ ಪ್ರಯತ್ನಿಸಿ ಇದನ್ನು ನಿವಾರಿಸಬೇಕೆಂದು ಕರೆ ನೀಡಿದ್ದರು. ಉತ್ತರಪ್ರದೇಶ ಚುನಾವಣೆಯಲ್ಲೂ ಇದು ಮಹತ್ತ್ವದ ವಿಷಯವಾಗಿತ್ತು. ಇವರ ಈ ಪ್ರಯತ್ನಕ್ಕೆ ಮುಸ್ಲಿಂ ಮಹಿಳೆಯರು ಎಲ್ಲೆಡೆ ಬೆಂಬಲ ವ್ಯಕ್ತಪಡಿಸಿದ್ದರು.**



Image posted on Facebook by Inventure Academy

ಬೆಂಗಳೂರಿನ ಪಿಯುಸಿ ವಿದ್ಯಾರ್ಥಿನಿ ಸಾಹಿತಿ ಪಿಂಗಳಿಯ ಹೆಸರನ್ನು ಒಂದು ಪುಟ್ಟ ಗ್ರಹಕ್ಕೆ ಇರಿಸಲಾಗಿದೆ. ಇಂಟೆಲ್ ಸಂಸ್ಥೆ ನಡೆಸುವ ಅಂತಾರಾಷ್ಟ್ರೀಯ ವಿಜ್ಞಾನ ಮತ್ತು ತಂತ್ರಜ್ಞಾನ ಸ್ಪರ್ಧೆಯಲ್ಲಿ ಈಕೆಯ ಕೆರೆಯ ನೀರಿನ ಗುಣಮಟ್ಟವನ್ನು ಅಳೆಯುವ ವಿಧಾನದ ಬಗೆಗಿನ ಪ್ರಾತ್ಯಕ್ಷಿಕೆಗಾಗಿ ಆಕೆಗೆ ಈ ಗೌರವ ದೊರೆತಿದೆ. ಅಂತಿಮ ಸುತ್ತಿನಲ್ಲಿದ್ದ 2,000 ಸ್ಪರ್ಧಿಗಳ ಪೈಕಿ ಈಕೆಗೆ ಮೊದಲ ಬಹುಮಾನ ದೊರೆತಿದೆ.

**ಕಪ್ಪು ಹಣ ಹಾಗು ತೆರಿಗೆ ವಂಚನೆಯ ವಿಷಯದಲ್ಲಿ ಕೇಂದ್ರ ಸರ್ಕಾರ ಕಳೆದ ವರ್ಷಗಳಲ್ಲಿ ಕಠಿಣ ಕ್ರಮ ಕೈಗೊಂಡಿರುವ ಪರಿಣಾಮ ಫಲಿತಾಂಶಗಳು ನಿಧಾನವಾಗಿ ಕಾಣಿಸುತ್ತಿದ್ದು ಇತ್ತೀಚೆಗೆ ಸರ್ಕಾರ ನೀಡಿರುವ ಕೆಲವು ಅಂಕಿ ಅಂಶಗಳು ಇದಕ್ಕೆ ಪುಷ್ಠಿ ನೀಡಿವೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ 56 ಲಕ್ಷಕ್ಕೂ ಅಧಿಕ ಜನರು ಹೊಸದಾಗಿ ಆದಾಯ ತೆರಿಗೆ ಘೋಷಣೆ ಸಲ್ಲಿಸಿರುವುದು ವರದಿಯಾಗಿದೆ. ಇನ್ನೊಂದು ಕಡೆ ಕಪ್ಪು ಹಣ ಮತ್ತು ಕಾನೂನು ಬಾಹಿರ ವಾಣಿಜ್ಯ ವ್ಯವಹಾರದ ಹಿನ್ನೆಲೆಯಲ್ಲಿ ಸುಮಾರು 1.75 ಲಕ್ಷ ಕಂಪೆನಿಗಳ ಮಾನ್ಯತೆಯನ್ನು ಕೇಂದ್ರ ಸರ್ಕಾರ ರದ್ದುಪಡಿಸಿದೆ**



ರಾಜ್ಯದ ಮದರಸಾಗಳ ನೋಂದಣಿಯನ್ನು ಕಡ್ಡಾಯ ಮಾಡಿರುವ ಉತ್ತರ ಪ್ರದೇಶ ಸರ್ಕಾರ ಅದಕ್ಕಾಗಿ ವೆಬ್‌ಸೈಟ್ ಒಂದನ್ನು ಆರಂಭಿಸಿದೆ. ರಾಜ್ಯದಲ್ಲಿ ಸುಮಾರು 16 ಸಾವಿರಕ್ಕೂ ಹೆಚ್ಚು ಮದರಸಾಗಳು ಕಾರ್ಯನಿರ್ವಹಿಸುತ್ತಿದ್ದು ಸುಮಾರು 10 ಸಾವಿರ ಮಾನ್ಯತೆ ಪಡದಿವೆ, ಅವುಗಳಲ್ಲಿ 560 ಸರ್ಕಾರದಿಂದ ಸಂಪೂರ್ಣ ಆರ್ಥಿಕ ಅನುದಾನ ಪಡೆಯತ್ತವೆ. ಕಳೆದ ಅನೇಕ ವರ್ಷಗಳಿಂದ ಮದರಸಾಗಳು ಸರ್ಕಾರಕ್ಕೆ ಯಾವುದೇ ಮಾಹಿತಿ ನೀಡುತ್ತಿರಲಿಲ್ಲ. ಹೊಸ ನಿರ್ದೇಶನದಂತೆ ಪ್ರತಿ ಮದರಸಾದ ಶಿಕ್ಷಕ ಹಾಗೂ ಇತರ ಸಿಬ್ಬಂದಿ, ವಿದ್ಯಾರ್ಥಿಗಳು, ಕಟ್ಟಡ ಮೊದಲಾದ ಮಾಹಿತಿಗಳನ್ನು ಫೋಟೊದೊಂದಿಗೆ ಸಲ್ಲಿಸುವುದು ಕಡ್ಡಾಯವಾಗಲಿದೆ.




**ಭಾರತೀಯ ರಿಸರ್ವ್ ಬ್ಯಾಂಕ್ ಮಹಾತ್ಮಾ ಗಾಂಧಿ ಸರಣಿಯ ಹೊಸ 50 ರೂಪಾಯಿ ಮುಖಬೆಲೆಯ ನೋಟನ್ನು ಹೊರತರುತ್ತಿದೆ. ತಿಳಿ ನೀಲಿ ಬಣ್ಣದ ಈ ನೋಟಿನಲ್ಲಿ ಹಂಪಿಯ ಕಲ್ಲಿನ ರಥ ರಾರಾಜಿಸಲಿದ್ದು ಭಾರತೀಯ ಸಾಂಸ್ಕೃತಿಕ ಪರಂಪರೆಯನ್ನು ಚಿತ್ರಿಸಲಿದೆ. ಕಳೆದ ವರ್ಷ ತರಲಾದ 500 ರೂಪಾಯಿಯ ನೋಟಿನ ಮಾದರಿಯಲ್ಲಿ ಗಾಂಧೀಜಿಯವರ ಭಾವಚಿತ್ರ, ಅಶೋಕ ಸ್ಥಂಭ, ಸ್ವಚ್ಛ ಭಾರತ ಮೊದಲಾದ ಲಾಂಛನಗಳಿದ್ದು ರಿಸರ್ವ್ ಬ್ಯಾಂಕ್ ಗವರ್ನರ್ ಉರ್ಜಿತ್ ಪಟೇಲ್ ಸಹಿ ಇರಲಿದೆ. 50 ಹಾಗೂ 20 ರೂಪಾಯಿ ಮುಖಬೆಲೆಯ ಹೊಸ ನೋಟುಗಳನ್ನು ಚಲಾವಣೆಗೆ ಬಿಡುಗಡೆ ಮಾಡುವುದಾಗಿ ರಿಸರ್ವ್ ಬ್ಯಾಂಕ್ ತಿಳಿಸಿದೆ.**




ನವದೆಹಲಿಯಲ್ಲಿರುವ ಪ್ರತಿಷ್ಠಿತ ಮಾಧ್ಯಮ ಶಿಕ್ಷಣ ಸಂಸ್ಥೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮಾಸ್ ಕಮ್ಯುನಿಕೇಶನ್ ಸಂಸ್ಕೃತ ಭಾಷೆಯ ಪತ್ರಿಕೋದ್ಯಮ ಕೋರ್ಸ್‌ನ್ನು ಪರಿಚಯಿಸಲಿದೆ. ಈ ಸಂಬಂಧ ಮಾನವ ಸಂಪನ್ಮೂಲ ವಿಕಾಸ ಮಂತ್ರಾಲಯದ ಅಡಿಯಲ್ಲಿ ಬರುವ ಶ್ರೀ ಲಾಲ್‌ಬಹಾದೂರ್ ಶಾಸ್ತ್ರಿ ಸಂಸ್ಕೃತ ವಿದ್ಯಾಪೀಠದೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆ. ಸಂಸ್ಕೃತ ಪತ್ರಿಕೋದ್ಯಮದ ಮೂರು ತಿಂಗಳ ಈ ಮುಂದುವರಿದ ಕೋರ್ಸಿನಲ್ಲಿ ಸಂಸ್ಕೃತ ಬೋಧನೆಯನ್ನು ವಿದ್ಯಾಪೀಠ ನಿರ್ವಹಿಸಲಿದೆ.

**ಮುಂದಿನ ಅಕ್ಟೋಬರ್ 1ರ ಒಳಗೆ ದೇಶದಲ್ಲಿರುವ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ 371 ಹೆದ್ದಾರಿ ಟೋಲ್ ಸಂಗ್ರಹ ಪ್ಲಾಜಾಗಳಲ್ಲಿ ಎಲೆಕ್ಟ್ರಾನಿಕ್ ಟೋಲ್ ಸಂಗ್ರಹ ವ್ಯವಸ್ಥೆ ಫಾಸ್ಟಾಗ್ (FASTag) ಕಾರ್ಯನಿರ್ವಹಿಸಲಿದೆ. ಪ್ರತಿ ಟೋಲ್ ಪ್ಲಾಜಾದಲ್ಲಿ ಕನಿಷ್ಠ ಒಂದು ಲೇನ್ ಇದಕ್ಕಾಗಿ ಮೀಸಲಿರಲಿದೆ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹೇಳಿದೆ. ಜನರು ಫಾಸ್ಟಾಗ್ ಖರೀದಿಸಲು ಮತ್ತು ರಿಚಾರ್ಜ್ ಮಾಡಿಕೊಳ್ಳಲು ಸುಲಭವಾಗುವಂತೆ ಎರಡು ಮೊಬೈಲ್ ಆ್ಯಪ್‌ಗಳನ್ನು ಬಿಡುಗಡೆ ಮಾಡಲಾಗಿದೆ. ಇದುವರೆಗೆ ಸುಮಾರು 6 ಲಕ್ಷ ಫಾಸ್ಟಾಗ್‌ಗಳನ್ನು ಮಾರಲಾಗಿದೆ ಎಂದು ಪ್ರಾಧಿಕಾರ ಹೇಳಿದೆ. ಈ ವ್ಯವಸ್ಥೆಯಿಂದ ಹೆದ್ದಾರಿ ಸುಂಕ ಸಂಗ್ರಹ ಪ್ಲಾಜಾಗಳಲ್ಲಿ ಉದ್ದದ ಸರತಿ ಸಾಲಿನಲ್ಲಿ ವಾಹನಗಳು ಸರಿದು ನಿಂತು ಸಮಯ ಮತ್ತು ಇಂಧನ ಪೋಲಾಗುವುದು ತಪ್ಪಬಹುದು.**




ಸಾಮಾನ್ಯ ಜನರಿಗೆ ಕೈಗೆಟುಕುವ ದರದಲ್ಲಿ ಸುಲಭವಾಗಿ ಔಷಧ ಸಿಗುವಂತಾಗಲು ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಜನ ಔಷಧಿ ಯೋಜನೆ ಅಡಿಯಲ್ಲಿ ದೇಶದ ವಿವಿಧೆಡೆ ಆರಂಭಗೊಂಡಿರುವ "ಜನ ಔಷಧಿ" ಮಳಿಗೆಗಳನ್ನು ಸರ್ಕಾರಿ ಸ್ವಾಮ್ಯದ ಪೆಟ್ರೋಲ್ ಬಂಕ್ ಆವರಣಗಳಲ್ಲೂ ತೆರೆಯಲು ಸರ್ಕಾರ ಚಿಂತನೆ ನಡೆಸಿದೆ. ಅಲ್ಲದೇ ಎನರ್ಜಿ ಎಫಿಶಿಯೆಂಟ್ ಸರ್ವೀಸ್ ಎಂಬ ಹೆಸರಿನ ಸರ್ಕಾರಿ ಸಂಸ್ಥೆಯೊಂದಿಗೆ ಕೇಂದ್ರದ ಇಂಧನ ಸಚಿವಾಲಯ ಒಡಂಬಡಿಕೆ ಮಾಡಿಕೊಂಡಿದ್ದು ಪೆಟ್ರೋಲ್ ಪಂಪ್‌ಗಳ ಮೂಲಕ ಎಲ್‌ಇಡಿ ಬಲ್ಬ್ ಮತ್ತಿತರ ಇಂಧನ ಕ್ಷಮತೆಯುಳ್ಳ ಎಲೆಕ್ಟ್ರಾನಿಕ್ಸ್ ಉಪಕರಣಗಳನ್ನು ಮಾರಾಟ ಮಾಡಲಾಗುವುದು. ಹಾಗೆಯೇ ಪೆಟ್ರೋಲ್ ಪಂಪ್‌ಗಳಲ್ಲಿ ಸಾಮಾನ್ಯ ಸೇವಾ ಕೇಂದ್ರಗಳನ್ನು ತೆರೆದು ಪ್ಯಾನ್ ಕಾರ್ಡ್, ಆಧಾರ್ ಮೊದಲಾದವುಗಳ ನೋಂದಣಿ, ಬಿಲ್ ಪಾವತಿ, ಕೃಷಿ ಸಂಬಂಧಿತ ಸೇವೆ ಮೊದಲಾದವುಗಳನ್ನು ಒದಗಿಸುವ ಚಿಂತನೆಯೂ ಸರ್ಕಾರದ ಮುಂದಿದೆ. ಸರ್ಕಾರಿ ಸ್ವಾಮ್ಯದ ಇಂಡಿಯನ್ ಆಯಿಲ್, ಹಿಂದುಸ್ತಾನ್ ಪೆಟ್ರೋಲಿಯಂ, ಭಾರತ್ ಪೆಟ್ರೋಲಿಯಂ ಸಂಸ್ಥೆಗಳು ದೇಶದಲ್ಲಿ ಸುಮಾರು 55 ಸಾವಿರಕ್ಕೂ ಹೆಚ್ಚು ಪೆಟ್ರೋಲ್ ಪಂಪ್‌ಗಳ ಬೃಹತ್ ಜಾಲವನ್ನು ಹೊಂದಿವೆ.

ಸ್ವಚ್ಛ ಭಾರತ

ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ

**ಸ್ವಚ್ಛ ಭಾರತ ಅಭಿಯಾನದ ಸಂದೇಶವನ್ನು ಜನಸಾಮಾನ್ಯರಿಗೆ ತಲುಪಿಸಿ ಇದರಲ್ಲಿ ದೊಡ್ಡ ಸಂಖ್ಯೆಯಲ್ಲಿ ಜನರನ್ನು ತೊಡಗಿಸುವಂತೆ ಮಾಡುವ ಸಲುವಾಗಿ ಕೇಂದ್ರ ಸರ್ಕಾರ ಆಗಸ್ಟ್ 17ರಿಂದ ಸೆಪ್ಟಂಬರ್ 8ರ ವರೆಗೆ ದೇಶಾದ್ಯಂತ ಕಿರುಚಿತ್ರ, ಪ್ರಬಂಧ ರಚನೆ, ಚಿತ್ರಪಟ ರಚನೆ ಮೊದಲಾದ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿದೆ. ಭಾರತವನ್ನು ಸ್ವಚ್ಛಗೊಳಿಸಲು ನಾನೇನು ಮಾಡಬಹುದು, ನನ್ನ ಕನಸಿನ ಸ್ವಚ್ಛ ಭಾರತ ಈ ವಿಷಯದಲ್ಲಿ ಸ್ಪರ್ಧಾಳುಗಳು ಕಿರುಚಿತ್ರ, ಪ್ರಬಂಧ, ಚಿತ್ರಗಳನ್ನು ಸಲ್ಲಿಸಬಹುದು. ಗೆದ್ದವರಿಗೆ ಅಕ್ಟೋಬರ್ 2ರಂದು ರಾಷ್ಟ್ರೀಯ ಸ್ವಚ್ಛ ಭಾರತ ಬಹುಮಾನವನ್ನು ನೀಡಲಾಗುವುದು.**



21 ವರ್ಷದ ಯುವಕ ಶಂಕರ್ ಯಾದವ್ ರಾಜಸ್ತಾನದ ಜೈಪುರ ಜಿಲ್ಲೆಯ ರಾವುಪುರದ ನಿವಾಸಿ. ಬಡತನದಿಂದಾಗಿ ಈ ಯುವಕನ ವಿದ್ಯಾರ್ಥಿ ದೆಸೆಯಲ್ಲಿ ಪಠ್ಯಪುಸ್ತಕಗಳನ್ನು ಕೊಂಡುಕೊಳ್ಳುವುದೂ ದೊಡ್ಡ ತೊಡಕಾಗಿತ್ತು. ಬಡತನದ ವಿರುದ್ಧ ಕಷ್ಟಪಟ್ಟು ಯಶಸ್ಸಿನ ಹೆಜ್ಜೆ ಇಟ್ಟ. ತಾನು ಬೆಳೆದುಬಂದ ಹಾದಿಯನ್ನು ಮಾತ್ರ ಮರೆಯಲಿಲ್ಲ. ತನ್ನಂತೆಯೇ ಸಾವಿರಾರು, ಲಕ್ಷಾಂತರ ವಿದ್ಯಾರ್ಥಿಗಳು ಪುಸ್ತಕ ಖರೀದಿಸಲಾಗದೆ ಕಷ್ಟಪಡುತ್ತಿರುವ ಬಗ್ಗೆ ಆತನಿಗೆ ತಿಳಿದಿತ್ತು. ಆ ಬಗ್ಗೆ ಚುರುಕಾಗಿ ಕಾರ್ಯನಿರ್ವಹಿಸಿ ವಿದ್ಯಾರ್ಥಿಗಳಿಗೆ ಪಠ್ಯ ಒದಗಿಸುವ ಆ್ಯಪ್‌ಗಳನ್ನು ಅಭಿವೃದ್ಧಿಪಡಿಸಿದ. ಇಂತಹ ಉಚಿತ ತಂತ್ರಾಂಶಗಳನ್ನು ಮೊಬೈಲ್‌ಗಳ ಮೂಲಕ ಒದಗಿಸುವ ಯೋಜನೆಯಿಂದಾಗಿ ಬಡ ವಿದ್ಯಾರ್ಥಿಗಳಿಗೆ ನೆರವಾದರು. ಶಿಕ್ಷಣ ವಿಷಯಕ್ಕೆ ಸಂಬಂಧಿಸಿದ ಇಂತಹ 40ಕ್ಕೂ ಅಧಿಕ ಆ್ಯಪ್‌ಗಳನ್ನು ಶಂಕರ್ ಅಭಿವೃದ್ಧಿಪಡಿಸಿದ್ದು ಇವುಗಳು 20 ಲಕ್ಷಕ್ಕೂ ಹೆಚ್ಚು ಸಂಖ್ಯೆಯ ಡೌನ್‌ಲೋಡ್ ಕಂಡಿವೆ.

पुंगव PUNGAVA
# 74, Ranga Rao Road, Shankarapuram,
Bangalore - 560 004. Ph: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10th and 25th of every Month REG.NO.CPMG/KA/BGS/102/2015-17

FORTNIGHTLY 1-9-2017



# ರಾಷ್ಟ್ರಸೇವಿಕಾ ಸಮಿತಿಯ ಪೂರ್ವ ಪ್ರಮುಖ ಸಂಚಾಲಿಕಾ ಉಷಾತಾಯಿ ನಿಧನ

ರಾಷ್ಟ್ರ ಸೇವಿಕಾ ಸಮಿತಿಯ (ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರೇರಣೆಯಿಂದ 1936ರಲ್ಲಿ ಪ್ರಾರಂಭವಾದ ರಾಷ್ಟ್ರವಾದಿ ಮಹಿಳಾ ಸಂಘಟನೆ) ಮೂರನೆಯ ಪ್ರಮುಖ ಸಂಚಾಲಿಕಾ ಆಗಿದ್ದ ಉಷಾತಾಯಿ ಚಾಟಿಯವರು ಆಗಸ್ಟ್ 17, 2017ರಂದು ನಾಗಪುರದಲ್ಲಿ ಕೊನೆಯುಸಿರೆಳೆದರು. ಅವರಿಗೆ 91 ವರ್ಷ ವಯಸ್ಸಾಗಿತ್ತು. ಉಷಾತಾಯಿಜೀ 1994ರಿಂದ 2006ರ ವರೆಗೆ ಸಮಿತಿಯ ಅತ್ಯುನ್ನತ ಹುದ್ದೆಯನ್ನು ನಿರ್ವಹಿಸಿ ಮಾರ್ಗದರ್ಶನ ಮಾಡಿದ್ದರು. ವಿದರ್ಭದ ಭಂಡಾರ ಎಂಬಲ್ಲಿ ಗಣೇಶ ಚತುರ್ಥಿಯ ದಿನ ಜನಿಸಿದ ಉಷಾತಾಯಿ ತಮ್ಮ ವಿದ್ಯಾಭ್ಯಾಸದ ನಂತರ ಅಲ್ಲಿಯ ಒಂದು ಶಾಲೆಯಲ್ಲಿ ಶಿಕ್ಷಕಿಯಾಗಿ ಕೆಲಕಾಲ ಕಾರ್ಯನಿರ್ವಹಿಸಿದರು. ವಿವಾಹಾನಂತರ ನಾಗಪುರಕ್ಕೆ ಬಂದು ನೆಲೆಸಿದ ಉಷಾತಾಯಿ ನಗರದ ಹಿಂದೂ ಮುಲಿಂಚಿ ಶಾಲಾ ಹೆಸರಿನ ಶಾಲೆಯೊಂದರಲ್ಲಿ ಪಾಠ ಮಾಡುತ್ತಿದ್ದರು. ಇವರನ್ನು ವರಿಸಿದ ಶ್ರೀ ಗುಣವಂತ ಚಾಟಿ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಕರ್ತರು. ಚಿಕ್ಕ ವಯಸ್ಸಿನಿಂದಲೂ ಸಮಿತಿಯ ಚಟುವಟಿಕೆಯಲ್ಲಿ ಪಾಲ್ಗೊಳ್ಳುತ್ತಿದ್ದ ಉಷಾತಾಯಿ ಸಮಿತಿಯ ಅನೇಕ ಜವಾಬ್ದಾರಿಯನ್ನು ನಿರ್ವಹಿಸಿದ ಅನುಭವ ಉಳ್ಳವರು. 1975ರಲ್ಲಿ ತುರ್ತುಪರಿಸ್ಥಿತಿಯ ಸಮಯದಲ್ಲಿ ಉಷಾತಾಯಿಯವರು ಸಕ್ರಿಯ ರಾಷ್ಟ್ರೀಯವಾದಿಯಾಗಿದ್ದರಿಂದ ಅವರನ್ನು ಬಂಧಿಸಲಾಗಿತ್ತು.

ಉಷಾತಾಯಿಯವರು ಮಧುರ ಕಂಠಸಿರಿ ಹೊಂದಿದ್ದರು. ನಾಗಪುರದ ಆಕಾಶವಾಣಿಯಲ್ಲಿ ಇವರು ಹಾಡಿದ ಹಾಡುಗಳು ಪ್ರಸಾರಗೊಳ್ಳುತ್ತಿದ್ದವು. ಆದರೆ ಸಮಿತಿಯ ಕೆಲಸಕ್ಕೆ ಸಮಯ ಕಡಿಮೆಯಾಗುತ್ತಿದ್ದ ಕಾರಣ ಸಂಪೂರ್ಣವಾಗಿ ಆಕಾಶವಾಣಿಯಲ್ಲಿ ಹಾಡುವುದನ್ನು ನಿಲ್ಲಿಸಿಯೇಬಿಟ್ಟರು. ತಮ್ಮ ಸರ್ವಸ್ವವನ್ನೂ ಸಮಿತಿಯ ಕೆಲಸಗಳಿಗೆ ಮುಡಿಪಾಗಿಟ್ಟರು. ವಿಶ್ವ ಹಿಂದೂ ಪರಿಷತ್ತಿನ ಕೇಂದ್ರೀಯ ವಿಶ್ವಸ್ಥ ಮಂಡಳಿಯ ಸದಸ್ಯರಾಗಿಯೂ ಅವರು ಜವಾಬ್ದಾರಿ ನಿರ್ವಹಿಸಿದರು. ವಾಗ್ಮಿತಾ ವಿಕಾಸ ಸಮಿತಿ ಎಂಬ ಸಂಘಟನೆಯನ್ನೂ ಹುಟ್ಟುಹಾಕಿ 30 ವರ್ಷಗಳ ಕಾಲ ಅಧ್ಯಕ್ಷರಾಗಿ ಮುನ್ನಡೆಸಿದರು. ಈ ಸಂಘಟನೆ ಮಕ್ಕಳ ಸಂಸ್ಕಾರ ತರಬೇತಿಗಳಲ್ಲಿ ಗಣನೀಯ ಕಾರ್ಯ ಮಾಡಿದೆ. ಜೋಷಿ ಪ್ರತಿಷ್ಠಾನ ಕೊಡಮಾಡುವ ರಾಷ್ಟ್ರೀಯ ಏಕಾತ್ಮತಾ ಪುರಸ್ಕಾರ, ದೋಂಬಿವಿಲಿ ಸ್ವಾಮಿ ವಿವೇಕಾನಂದ ಸಂಸ್ಥೆ ನೀಡುವ ವಿವೇಕಾನಂದ ಪುರಸ್ಕಾರ, ಭೋಪಾಲದ ಪ್ರತಿಷ್ಠಿತ ಓಜಸ್ವಿನಿ ಪುರಸ್ಕಾರಕ್ಕೆ ಇವರು ಭಾಜನರಾಗಿದ್ದರು.

ನಾಗಪುರದಲ್ಲಿ ನಡೆದ ಅಂತಿಮ ಸಂಸ್ಕಾರದಲ್ಲಿ ಆರ್‌ಎಸ್‌ಎಸ್‌ನ ಸರಕಾರ್ಯವಾಹರಾದ ಸುರೇಶ್ ಭಯ್ಯಾಜಿ ಜೋಷಿ, ಸಮಿತಿಯ ಪ್ರಮುಖ ಸಂಚಾಲಿಕಾ ವಿ ಶಾಂತಕುಮಾರಿ, ನಿಕಟಪೂರ್ವ ಪ್ರಮುಖ ಸಂಚಾಲಿಕಾ ಪ್ರಮಿಳಾ ತಾಯಿ ಮೇಢೇ ಹಾಗೂ ನೂರಾರು ಸೇವಿಕಾ ಸದಸ್ಯರು, ಸ್ವಯಂಸೇವಕರು ಪಾಲ್ಗೊಂಡರು. ಆರೆಸ್ಸೆಸ್ ಸರಸಂಘಚಾಲಕ ಮೋಹನ್ ಭಾಗವತ್ ಉಷಾತಾಯಿಯವರನ್ನು 'ಆತ್ಮವಿಲೋಪಿ ವ್ಯಕ್ತಿತ್ವ' ಎಂದು ಬಣ್ಣಿಸಿದ್ದಾರೆ. ಪ್ರವಾಸದಲ್ಲಿರುವ ಅವರು ಹುಬ್ಬಳ್ಳಿಯ ಮಾತೃ ಮಂದಿರದಲ್ಲಿ ಉಷಾತಾಯಿಯವರ ನೆನಪಿನಲ್ಲಿ ಗಿಡವೊಂದನ್ನು ನೆಡುವ ಮೂಲಕ ಶ್ರದ್ಧಾಂಜಲಿ ಸಮರ್ಪಿಸಿದ್ದಾರೆ.



# ಗಂಗಾಪೂಜೆಯೊಂದಿಗೆ ಕೆರೆ ಸಂರಕ್ಷಣೆಯ ಯಶಸ್ಸಿನ ಸಂಭ್ರಮಾಚರಣೆ

ಈ ಬಾರಿಯ ಮುಂಗಾರು ಮಳೆ ಏಪ್ರಿಲ್ ತಿಂಗಳಿನಲ್ಲಿಯೇ ಭೂಮಿಗಿಳಿದಾಗ ಬೆಂಗಳೂರಿನ ಚಂದಾಪುರ ಭಾಗದ ಬೇಗೂರು ನಗರದಲ್ಲಿನ, ಅಕ್ಷಯ ನಗರ ವಸತಿಯಲ್ಲಿನ ಆರೆಸ್ಸೆಸ್ ಪ್ರಭಾತ ಶಾಖೆಯ ಕೆರೆ ಸಂರಕ್ಷಣಾ ತಂಡಕ್ಕೆ ಹೆಚ್ಚಿನ ಸಂತೋಷವಾಗಲು ಹಲವಾರು ಕಾರಣಗಳಿದ್ದವು.

ಕಳೆದ ಹಲವಾರು ವರ್ಷಗಳಿಂದ ದುಃಸ್ಥಿತಿಯಲ್ಲಿದ್ದ ವಸತಿಯ ಕೆರೆಯನ್ನು ಉತ್ತಮಪಡಿಸುವ ಮತ್ತು ಅಭಿವೃದ್ಧಿಗೊಳಿಸುವ ಕಾರ್ಯಕ್ಕಾಗಿ ಈ ತಂಡ  ಕಳೆದ 3 ವರ್ಷಗಳಿಂದ ಟೊಂಕಕಟ್ಟಿ ದುಡಿದಿದೆ. ಈ ವರ್ಷದ ಬೇಸಿಗೆಯಲ್ಲಿ ಕೆರೆ ಬರಿದಾದಾಗ ಅದರಲ್ಲಿನ ಹೂಳನ್ನು ಸ್ವಚ್ಛಗೊಳಿಸುವ ಕಾರ್ಯದಿಂದ ಮೊದಲ್ಗೊಂಡು ಬಿ.ಡಿ.ಎ. ಸಹಾಯದಿಂದ ಸೇತುವೆಯ ಹೊರಭಾಗದಲ್ಲಿ ಮತ್ತು ದಡದ ಎರಡೂ ಬದಿಗಳಲ್ಲಿ ಕಲ್ಲು ಜೋಡಣೆ ಮಾಡಿಸಿ ಅಚ್ಚುಕಟ್ಟುಗೊಳಿಸುವಲ್ಲಿ ಸಾಕಷ್ಟು ಶ್ರಮವಹಿಸಲಾಗಿದೆ. ನಾಗರಿಕರ ಸಹಾಯದಿಂದ ಹೊರಾಂಗಣ ರಂಗಮಂದಿರದ ನಿರ್ಮಾಣ ಮಾಡಿಸಿದೆ. ಅಲ್ಲದೆ ಚಿಕ್ಕ ಆಟದ ಮೈದಾನವನ್ನೂ ಸಿದ್ಧಗೊಳಿಸಿದ್ದು, ಕೆರೆಸಂರಕ್ಷಣಾ ತಂಡದ ಕಾರ್ಯಕುಶಲತೆಗೆ ಸಾಕ್ಷಿಯಾಗಿದೆ.


ಬರಿದಾಗಿದ್ದ ಕೆರೆಯ ಮಡಿಲಲ್ಲಿ ಮಳೆನೀರು ತುಂಬಿದಾಗ ಧನ್ಯತಾಭಾವ ತುಂಬಿದ್ದ ತಂಡದ ಸದಸ್ಯರಿಗೆ  ತಕ್ಷಣಕ್ಕೆ ನೆನಪಿಗೆ ಬಂದಿದ್ದು  ಭಾರತೀಯ ಸಂಸ್ಕೃತಿಯ ಭಾಗವಾದ ಪ್ರತಿ ಜಲಕಣದಲ್ಲೂ ಗಂಗೆಯನ್ನು ಕಂಡು ಆರಾಧಿಸುವ ಪವಿತ್ರ ಭಾವ. ಅಂತೆಯೇ ಕೆರೆಯಲ್ಲಿ ಗಂಗಾಪೂಜೆಯನ್ನು ನೆರವೇರಿಸಲು ನಿರ್ಧರಿಸಲಾಯಿತು. ನಮ್ಮ ಕೆರೆಯೇ  ನಮ್ಮೆಲ್ಲರ ಜೀವನಕ್ಕೆ ಆಧಾರ. ಅದೇ ನಮ್ಮ ಜೀವನಾಡಿ ಅದುವೇ ನಮ್ಮ ದೇವರು. ಕೆರೆಯ ಪರಿಸರವೇ ನಮ್ಮ ದೇವಾಲಯವೆಂದು ಪೂಜಿಸಲು ಕೆರೆ ಸಂರಕ್ಷಣಾ ತಂಡವು ಗಂಗಾ ಆರತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿತು.



ವ್ಯಾಸ ಪೂರ್ಣಿಮೆಯ ಗೋಧೂಳಿ ಮುಹೂರ್ತದಲ್ಲಿ ಸುಬ್ರಹ್ಮಣ್ಯ ಮಠದ ತಂಡದ ಚೆಂಡೆವಾದನದಿಂದ ಕಾರ್ಯಕ್ರಮ ಪ್ರಾರಂಭಿಸಲಾಯಿತು. ಶ್ರೀ ಲಕ್ಷ್ಮೀ ನರಸಿಂಹ ತಂಡದಿಂದ ಭಜನೆ, ವೇದ ಪಾರಾಯಣ ತಂಡದ ವೇದಘೋಷಗಳ ನಂತರ ಕೆರೆಯ ದಂಡೆಯ ಮೇಲೆ ದೀಪೋಜ್ವಲನ ಮತ್ತು ಗಂಗಾ ಆರತಿ ವಿಜೃಂಭಣೆಯಿಂದ  ನೆರವೇರಿದವು. 250 ರಿಂದ 300 ಜನ ಸೇರುವ ನಿರೀಕ್ಷೆ ಇಟ್ಟುಕೊಂಡ ಸಂರಕ್ಷಣಾ ತಂಡ ಪ್ರಸಾದಕ್ಕೆ 400 ತಟ್ಟೆಗಳ ವ್ಯವಸ್ಥೆಯನ್ನು ಮಾಡಿತ್ತು. ಆದರೆ ಎಲ್ಲರ ನಿರೀಕ್ಷೆಗೂ ಮೀರಿ ಬರೋಬ್ಬರಿ 900 ಜನ ಸೇರಿದಾಗ ತಂಡದ ಸದಸ್ಯರಿಗೆ ಆದ ಸಂತೋಷಕ್ಕೆ ಪಾರವೇ ಇರಲಿಲ್ಲ.

ಅಕ್ಷಯ ನಗರ ಕೆರೆ ಸಂರಕ್ಷಣಾ ತಂಡದ ಕಾರ್ಯವು ಆ ವಸತಿಯಲ್ಲಿ ಮಾತ್ರವಲ್ಲದೆ  ಸುತ್ತಲಿನ ಇತರೆ ಪರಿಸರ ಪ್ರೇಮಿಗಳಲ್ಲಿಯೂ  ತಮ್ಮ ಕೆರೆಗಳ ಸ್ಥಿತಿಯನ್ನು ಸುಧಾರಿಸುವ ಹುರುಪು ತುಂಬಿದೆ. ತಮ್ಮ ಸಾರ್ಥಕ ಪ್ರಯತ್ನಕ್ಕೆ ಸಾರ್ವಜನಿಕರಿಂದ ದೊರೆತ ಅಭೂತಪೂರ್ವ ಪ್ರತಿಕ್ರಿಯೆಯಿಂದ ಉತ್ಸಾಹಿತವಾಗಿರುವ ಕೆರೆ ಸಂರಕ್ಷಣಾ ತಂಡ, ಪರಿಸರ ಸಂರಕ್ಷಣೆಯ ಮಹತ್ವವನ್ನು ತಿಳಿಯಪಡಿಸುವ ಗಂಗಾಪೂಜೆಯ ಕಾರ್ಯಕ್ರಮವನ್ನು  ಪ್ರತಿ ವರ್ಷವೂ ಆಚರಿಸುವ ಯೋಜನೆಯನ್ನು ಹಾಕಿಕೊಂಡಿದೆ.

## ಚೀನಾದ ಉತ್ಪನ್ನಗಳನ್ನು ಬಹಿಷ್ಕರಿಸುವಂತೆ ಬಾಬಾ ರಾಮ್‌ದೇವ್ ಕರೆ



ಭಾರತದ ವಿರುದ್ಧ ಪಿತೂರಿ ನಡೆಸುತ್ತಿರುವ ಚೀನಾದ ಉತ್ಪನ್ನಗಳನ್ನು ಬಹಿಷ್ಕರಿಸುವಂತೆ ಯೋಗಗುರು ಬಾಬಾ ರಾಮ್‌ದೇವ್ ಕರೆ ನೀಡಿದ್ದಾರೆ. ಪಾಕಿಸ್ತಾನದ ಭಯೋತ್ಪಾದಕರಿಗೆ ಚೀನಾ ಬೆಂಬಲ ನೀಡುತ್ತಿದೆ. ಮೊದಲು ನಾವು ಪಾಕ್ ಆಕ್ರಮಿತ ಜಮ್ಮು ಕಾಶ್ಮೀರವನ್ನು ಪುನಃ ಭಾರತ ತನ್ನ ವಶಕ್ಕೆ ಪಡೆಯಬೇಕು ಮತ್ತು ಚೀನಾದ ಎಲ್ಲ ಉತ್ಪನ್ನಗಳನ್ನು ಬಹಿಷ್ಕರಿಸಬೇಕು ಎಂದು ಅವರು ಹೇಳಿದ್ದಾರೆ. ಪಕ್ಷಾತೀತವಾಗಿ ಎಲ್ಲ ರಾಜಕೀಯ ಪಕ್ಷಗಳು ಚೀನಾವನ್ನು ಬಹಿಷ್ಕಾರ ಅಭಿಯಾನದಲ್ಲಿ ಕೈಜೋಡಿಸಬೇಕು ಎಂದು ಅವರು ಕರೆ ನೀಡಿದ್ದಾರೆ.

## ಆರೆಸ್ಸೆಸ್ ಕಾರ್ಯಕರ್ತನ ಹತ್ಯೆ ಪ್ರಕರಣ ಹಲವು ಪಿಎಫ್‌ಐ ಸದಸ್ಯರ ಬಂಧನ



ಇತ್ತೀಚೆಗೆ ಮಂಗಳೂರಿನ ಬಿ.ಸಿ. ರೋಡ್‌ನಲ್ಲಿ ದುಷ್ಕರ್ಮಿಗಳಿಂದ ಆರೆಸ್ಸೆಸ್ ಕಾರ್ಯಕರ್ತ ಶರತ್ ಮಡಿವಾಳ ಕೊಲೆಗೀಡಾದ ಪ್ರಕರಣದಲ್ಲಿ ಹಲವರನ್ನು ಪೊಲೀಸರು ಬಂಧಿಸಿದ್ದಾರೆ. ಮೊದಲು ಬಂಧನಕ್ಕೊಳಗಾದ ಇಬ್ಬರಲ್ಲಿ ಕಲಿಉಲ್ಲಾ ಎಂಬಾತನು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ಚಾಮರಾಜನಗರ ಘಟಕದ ಅಧ್ಯಕ್ಷನಾಗಿದ್ದಾನೆ. ಇನ್ನೋರ್ವ ಅಬ್ದುಲ್ ಶಫಿ ಬಂಟ್ವಾಳದ ನಿವಾಸಿಯಾಗಿದ್ದಾನೆ. ಮರುದಿವಸ ಇನ್ನೂ ಮೂವರನ್ನು ಪೊಲೀಸರು ಬಂಧಿಸಿದ್ದು ಇವರಲ್ಲಿ ಇಬ್ಬರು ಚಾಮರಾಜನಗರದ ನಿವಾಸಿಗಳಾಗಿದ್ದಾರೆ.

ಮೂವತ್ತು ಜನ ಪೊಲೀಸರ ತಂಡ ಕಳೆದ ಹಲವು ದಿನಗಳಿಂದ ಕಾರ್ಯಾಚರಣೆ ನಡೆಸುತ್ತಿದ್ದು ಶಿವಮೊಗ್ಗ, ಕಾರವಾರ, ಬೆಂಗಳೂರು, ಮಹಾರಾಷ್ಟ್ರ ಮೊದಲಾದ ಕಡೆ 50ಕ್ಕೂ ಹೆಚ್ಚು ಜನರನ್ನು ವಿಚಾರಣೆಗೆ ಒಳಪಡಿಸಿ ಮಾಹಿತಿ ಸಂಗ್ರಹಿಸಿದೆ. ಬೆಂಗಳೂರಿನಲ್ಲಿ ಕಳೆದ ವರ್ಷ ನಡೆದ ಆರೆಸ್ಸೆಸ್ ಕಾರ್ಯಕರ್ತ ರುದ್ರೇಶ್ ಕೊಲೆ ಪ್ರಕರಣವೂ ಸೇರಿದಂತೆ ಅನೇಕ ಪ್ರಕರಣಗಳಲ್ಲಿ ಪಿಎಫ್‌ಐ ಮತ್ತಿತರ ಮುಸ್ಲಿಂ ಮೂಲಭೂತವಾದಿ ಸಂಘಟನೆಗಳ ಕಾರ್ಯಕರ್ತರು ಪಾಲ್ಗೊಂಡಿರುವುದು ಬಹಿರಂಗಗೊಳ್ಳುತ್ತಿದೆ.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ: ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19.